ಪಾವತಿ ಮತ್ತು ಇತ್ಯರ್ಥ ಪದ್ಧತಿಗಳು

ಸಂದಾಯ ಮತ್ತು ಹಣ ಚುಕ್ತಾ ವ್ಯವಸ್ಥೆಗಳು

ಯಾವುದೇ ದೇಶದ ಕೇಂದ್ರೀಯ ಬ್ಯಾಂಕು ರಾಷ್ಟ್ರೀಯ ಸಂದಾಯ ವ್ಯವಸ್ಥೆಯ ಅಭಿವೃದ್ಧಿಯಲ್ಲಿ ಸಾಮಾನ್ಯವಾಗಿ ಚಾಲನಶಕ್ತಿಯಾಗಿರುತ್ತದೆ. ಭಾರತೀಯ ರಿಜರ್ವ್ ಬ್ಯಾಂಕ್ (ಆರ್‌ಬಿಐ) ದೇಶದ ಕೇಂದ್ರೀಯ ಬ್ಯಾಂಕ್ ಆಗಿ ಅಭಿವೃದ್ಧಿ ಪಾತ್ರವನ್ನು ನಿರ್ವಹಿಸುತ್ತದೆ ಮತ್ತು ಸುರಕ್ಷಿತ, ಭದ್ರ, ಉತ್ತಮ ಮತ್ತು ದಕ್ಷ ಸಂದಾಯ ವ್ಯವಸ್ಥೆಗಾಗಿ ಹಲವಾರು ಕ್ರಮಗಳನ್ನು ಕೈಗೊಂಡಿದೆ. ಈ ಬಗ್ಗೆ ಆಗಾಗ ಕೇಳಲಾಗುತ್ತಿರುವ ಪ್ರಶ್ನೆಗಳನ್ನು, ಪ್ರಶ್ನೋತ್ತರಗಳ ರೂಪದಲ್ಲಿ ಈ ಕೆಳಗೆ ಕೊಡಲಾಗಿದೆ.

1. ಸಂದಾಯ ವ್ಯವಸ್ಥೆ ಎಂದರೇನು?

ಸಂದಾಯ ವ್ಯವಸ್ಥೆಯು, ಸಂದಾಯ ಮಾಡುವವ ಮತ್ತು ಫಲಾನುಭವಿ ಇವರ ನಡುವೆ ಮೌಲ್ಯದ ವರ್ಗಾವಣೆಯನ್ನು ಕಲ್ಪಿಸುವ ಒಂದು ಪ್ರಕ್ರಿಯೆಯಾಗಿರುತ್ತದೆ. ಇದರ ಮೂಲಕ ಸಂದಾಯ ಮಾಡುವವನು ಫಲಾನುಭವಿಗೆ ತನ್ನ ಸಂದಾಯದ ಹೊಣೆಗಾರಿಕೆಗಳನ್ನು ಪೂರೈಸುತ್ತಾನೆ. ಸಂದಾಯ ವ್ಯವಸ್ಥೆಯು ಅರ್ಥ ವ್ಯವಸ್ಥೆಯಲ್ಲಿ ಸರಕುಗಳ ಮತ್ತು ಸೇವೆಗಳ ವಿನಿಮಯ ರೂಪದಲ್ಲಿ ಎರಡು ರೀತಿಯ ಸಂದಾಯಗಳ ಹರಿವುಗಳಿಗೆ ಅವಕಾಶ ಕಲ್ಪಿಸುತ್ತದೆ.

2. ಯಾವುದೇ ಸಂದಾಯ ವ್ಯವಸ್ಥೆಯ ಘಟಕಾಂಶಗಳು ಯಾವುವು?

ಸಂದಾಯ ವ್ಯವಸ್ಥೆಗಳು ಸಂಲೇಖಗಳನ್ನು ಒಳಗೊಳ್ಳುತವೆ. ಇವುಗಳ ಮೂಲಕ ಸಂದಾಯಗಳನ್ನು ಮಾಡಬಹುದಾಗಿದೆ. ಈ ಸಂದಾಯಗಳಿಗೆ ನಿಯಮಗಳು, ನಿಯಂತ್ರಣಗಳು ಮತ್ತು ಕಾರ್ಯವಿಧಾನಗಳು ಮಾರ್ಗದರ್ಶನ ನೀಡುತ್ತವೆ. ಸಂಸ್ಥೆಗಳು ಸಂದಾಯ ವ್ಯವಸ್ಥೆಗಳು ಹಾಗೂ ಕಾನೂನು ವ್ಯವಸ್ಥೆಗಳು ಇತ್ಯಾದಿಗಳಿಗೆ ಅವಕಾಶ ಮಾಡಿಕೊಡುತ್ತವೆ. ಈ ಸಂಸ್ಥೆಗಳನ್ನು ವಿವಿಧ ಭಾಗೀದಾರರ ನಿಧಿಯ ವರ್ಗಾವಣೆಗೆ ಅನುಕೂಲ ಕಲ್ಪಿಸಲು ಸ್ಥಾಪಿಸಲಾಗಿದೆ.

3. ಸಂದಾಯಗಳನ್ನು ಮಾಡಲು ಸಂದಾಯ ವ್ಯವಸ್ಥೆಗಳನ್ನು ಯಾರು ಉಪಯೋಗಿಸಿಕೊಳ್ಳಬಹುದು?

ಒಬ್ಬರಿಂದ ಮತ್ತೊಬ್ಬರಿಗೆ ಸಂದಾಯಗಳನ್ನು ಮಾಡಲು ವ್ಯಕ್ತಿಗಳು, ಬ್ಯಾಂಕುಗಳು, ಕಂಪನಿಗಳು, ಸರ್ಕಾರಗಳು ಇತ್ಯಾದಿಯವರಿಂದ ಸಂದಾಯ ವ್ಯವಸ್ಥೆಗಳನ್ನು ಬಳಸಿಕೊಳ್ಳಲಾಗುತ್ತಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಯಾವನೇ ವ್ಯಕ್ತಿಯು, ಇತರ ಯಾವನೇ ವ್ಯಕ್ತಿಗೆ ಸಂದಾಯವನ್ನು ಮಾಡಬೇಕಾದಾಗ ಅಂಥ ಸಂದಾಯವನ್ನು ಮಾಡಲು ಸಂದಾಯ ವ್ಯವಸ್ಥೆಯ ಒಂದು ಅಥವಾ ಇತರ ರೀತಿಯನ್ನು ಬಳಸಬಹುದಾಗಿದೆ.

4. ಗ್ರಾಹಕನು ಬ್ಯಾಂಕುಗಳ ಮೂಲಕ ಸಂದಾಯಗಳನ್ನು ಮಾಡಬಹುದಾದ ಮಾರ್ಗಗಳು ಯಾವುವು?

ಭಾರತದಲ್ಲಿ ಸಂದಾಯಗಳನ್ನು ನಗದು, ಚೆಕ್ಕು, ಡಿಮ್ಯಾಂಡ್ ಡ್ರಾಫ್ಟ್, ಕ್ರೆಡಿಟ್ ಕಾರ್ಡುಗಳು, ಡೆಬಿಟ್ ಕಾರ್ಡುಗಳು, ಹಾಗೂ ಬ್ಯಾಂಕರುಗಳಿಗೆ ಸೂಚನೆಗಳನ್ನು ನೀಡುವ ಮೂಲಕ ವಿದ್ಯುನ್ಮಾನ ಮೂಲಕವೂ ಮಾಡಬಹುದು. ಇಲ್ಲಿ ಗ್ರಾಹಕರ ಪರವಾಗಿ ಅಂಥ ಸಂದಾಯವನ್ನು ಬ್ಯಾಂಕುಗಳು ಮಾಡುವರು. ಸಣ್ಣ ಮೊತ್ತದ ಸಂದಾಯಗಳನ್ನು ಇಸಿಎಸ್ (ECS) ಮತ್ತು ಇಎಫ್‌ಟಿ (EFT) ಗಳ ಮೂಲಕ ಹಾಗೂ ದೊಡ್ಡ ಮೌಲ್ಯದ ಸಂದಾಯಗಳಿಗಾಗಿ ರಿಯಲ್ ಟೈಮ್ ಗ್ರಾಸ್ ಸೆಟಲ್‌ಮೆಂಟ್ (RTGS) ವ್ಯವಸ್ಥೆ ಮೂಲಕ ಮಾಡಬಹುದು. ಹಲವು ಬ್ಯಾಂಕುಗಳು ನಿಧಿಗಳ ವರ್ಗಾವಣೆಯನ್ನು ವಿದ್ಯುನ್ಮಾನದ ಮೂಲಕ ಅನುಕೂಲ ಕಲ್ಪಿಸುತ್ತವೆ. ಇದನ್ನು ಇಂಟರ್ ನೆಟ್ ಮೂಲಕ ಕೆಲವು ಬ್ಯಾಂಕಿಂಗ್ ಸೇವೆಗಳನ್ನು ಒದಗಿಸಲು ಭಾರತದಲ್ಲಿನ ಕೆಲವು ಬ್ಯಾಂಕುಗಳು ಪ್ರಾರಂಭಿಸಿವೆ.

5. ಸಂದಾಯ ಮಾಡುವವನು ಸಂದಾಯ ಸ್ವೀಕರಿಸಿದವರಿಗೆ ಚೆಕ್ಕನ್ನು ನೀಡಿದಾಗ ಸಂದಾಯವನ್ನು ಹೇಗೆ ಮಾಡಲಾಗುತ್ತದೆ?

ಚೆಕ್ ಸಂದಾಯದ ಪ್ರಕ್ರಿಯೆಗಳು, ಸಂದಾಯ ಮಾಡುವವನು ತನ್ನ ಸ್ವಂತ ಚೆಕ್ಕನ್ನು ಫಲಾನುಭವಿಗೆ ನೀಡಿದಾಗ ಪ್ರಾರಂಭವಾಗುತ್ತದೆ. ನಿಧಿಗಳ ವಾಸ್ತವಿಕ ಸಂದಾಯವನ್ನು ಪಡೆಯುವ ದೃಷ್ಟಿಯಿಂದ, ಚೆಕ್ಕನ್ನು ಸ್ವೀಕರಿಸಿದವನು ಆ ಚೆಕ್ಕನ್ನು ತನ್ನ ಬ್ಯಾಂಕ್ ಖಾತೆಯಲ್ಲಿ ಠೇವಣಿ ಮಾಡಬೇಕಾಗುವುದು. ಫಲಾನುಭವಿಯು ಅದೇ ನಗರದಲ್ಲಿ ಅದೇ ಬ್ಯಾಂಕಿನಲ್ಲಿ ಒಂದು ಖಾತೆಯನ್ನು ಹೊಂದಿದ್ದರೆ, ಬ್ಯಾಂಕುಗಳು ತಮ್ಮ ಅಂತರಿಕ ವ್ಯವಸ್ಥೆಯ ಮೂಲಕ ಹಣ ಜಮಾ ಮಾಡುತ್ತವೆ ಹಾಗೂ ಇತರ ಯಾವುದೇ ನಗರದಲ್ಲಿ ಅಥವಾ ಬೇರೆ ಬ್ಯಾಂಕುಗಳಲ್ಲಿ ಖಾತೆಯನ್ನು ಹೊಂದಿದ್ದರೆ, ಆಗ ಕ್ಲಿಯರಿಂಗ್ ಹೌಸ್ ಮೂಲಕ ಸಂದಾಯ ಮಾಡುವವನ ಬ್ಯಾಂಕರ್‌ನಿಂದ ನಿಧಿಗಳನ್ನು ಸಂಗ್ರಹಿಸಲಾಗುತ್ತಿದೆಯೆಂದು ಆತನ ಬ್ಯಾಂಕರನು ಖಾತ್ರಿ ಪಡಿಸಿಕೊಳ್ಳುವನು.

6. ತೀರುವೆ ಮನೆ (ಕ್ಲಿಯರಿಂಗ್ ಹೌಸ್) ಎಂದರೇನು?

ತೀರುವೆ ಮನೆ ನಗರ / ಸ್ಥಳದೊಳಗೆ ವಿವಿಧ ಬ್ಯಾಂಕ್ ಶಾಖೆಗಳ ನಡುವೆ ಚೆಕ್ಕುಗಳ ಮೂಲಕ ಸಂದಾಯಗಳಿಗೆ ಅನುಕೂಲ ಕಲ್ಪಿಸುವ ಬ್ಯಾಂಕುಗಳ ಒಂದು ಸಂಘವಾಗಿದೆ. ಅದು ಒಬ್ಬರು ಮತ್ತೊಬ್ಬರ ಮೇಲೆ ಡ್ರಾ ಮಾಡಿದ ಚೆಕ್ಕುಗಳ ವಿನಿಮಯಕ್ಕೆ ಬ್ಯಾಂಕರುಗಳಿಗೆ ಕೇಂದ್ರ ಸಂದರ್ಶನ ಸ್ಥಳವಾಗಿ ಕಾರ್ಯ ನಿರ್ವಹಿಸುತ್ತದೆ. ಅಂಥ ಕಾರ್ಯಾಚರಣೆಗಳನ್ನು ಕ್ಲಿಯರಿಂಗ್ ಕಾರ್ಯಾಚರಣೆಗಳೆಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಒಂದು ಬ್ಯಾಂಕನ್ನು ಕ್ಲಿಯರಿಂಗ್ ಕಾರ್ಯಾಚರಣೆಗಳ ಪ್ರಭಾರದಲ್ಲಿರುವಂತೆ ನೇಮಕ ಮಾಡಲಾಗುತ್ತಿದೆ. 4 ಮೆಟ್ರೋಗಳು ಮತ್ತು ಕೆಲವು ಇತರ ಮುಖ್ಯ ನಗರಗಳಲ್ಲಿ ಭಾರತೀಯ ರಿಜರ್ವ್ ಬ್ಯಾಂಕು ತೀರುವೆಮನೆ ಕಾರ್ಯಾಚರಣೆಗಳನ್ನು ನೋಡಿಕೊಳ್ಳುತ್ತಿದೆ. ಆರ್.ಬಿ.ಐ ಗೊತ್ತುಪಡಿಸಿದಂತೆ ತನ್ನ ಕಾರ್ಯಾಚರಣೆಗಳನ್ನು ನಡೆಸುವುದಕ್ಕಾಗಿ ಪ್ರತಿಯೊಂದು ತೀರುವೆ ಮನೆ ಏಕರೂಪದ ನಿಬಂಧನೆಗಳು ಮತ್ತು ನಿಯಮಗಳನ್ನು ಹೊಂದಿದೆ. ಚೆಕ್ ಸಂದಾಯಗಳಿಗೆ ಅನುಕೂಲ ಕಲ್ಪಿಸಲು ದೇಶದಾದ್ಯಂತ 1000 ಕ್ಕಿಂತ ಹೆಚ್ಚು ತೀರುವೆ ಮನೆಗಳು ಕಾರ್ಯಾಚರಣೆ ನಡೆಸುತ್ತಿವೆ. ಇವುಗಳನ್ನು ಆರ್.ಬಿ.ಐ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಇತರ ಸಾರ್ವಜನಿಕ ವಲಯದ ಬ್ಯಾಂಕುಗಳು ವ್ಯವಸ್ಥಾಪನೆ ಮಾಡುತ್ತಿವೆ.

7. ಈ ತೀರುವೆ ಪ್ರಕ್ರಿಯೆಗಳಿಗಾಗಿ ತೆಗೆದುಕೊಳ್ಳಬಹುದಾದ ಸಮಯವೆಷ್ಟು?

ಸಾಮಾನ್ಯವಾಗಿ ಚೆಕ್ಕು ಅದೇ ನಗರದೊಳಗೆ ಸಂದಾಯ ಮಾಡಬೇಕಾಗಿದ್ದರೆ, (ಸ್ಥಳೀಯ ಚೆಕ್) ಅದು 2 ರಿಂದ 3 ದಿವಸ ತೆಗೆದುಕೊಳ್ಳುತ್ತದೆ. ಕೆಲವು ದೊಡ್ಡ ನಗರಗಳಲ್ಲಿ "ಅಧಿಕ ಮೌಲ್ಯದ ತೀರುವೆ" (ಹೈ ವ್ಯಾಲ್ಯೂ ಕ್ಲಿಯರಿಂಗ್) ಎಂದು ಕರೆಯಲಾಗುವ ಒಂದು ವ್ಯವಸ್ಥೆ ಇದೆ, ಇದು ಒಂದೇ ದಿವಸದಲ್ಲಿ ಚೆಕ್ ತೀರುವೆ ವೃತ್ತವನ್ನು ಪೂರ್ತಿಗೊಳಿಸುತ್ತದೆ ಮತ್ತು ಚೆಕ್ಕನ್ನು ಠೇವಣಿ ಇಡುವ ಗ್ರಾಹಕನು ಉತ್ಪತ್ತಿಗಳನ್ನು ಮರುದಿವಸ ಬೆಳಿಗ್ಗೆ ಉಪಯೋಗಿಸಿಕೊಳ್ಳಲು ಅನುಮತಿಸಲಾಗುತ್ತದೆ. ಆದಾಗ್ಯೂ ಈ ಹೈ ವ್ಯಾಲ್ಯೂ ಕ್ಲಿಯರಿಂಗ್‌ನ ಒಳಗೊಳ್ಳುವಿಕೆಯು ಅತ್ಯಂತ ಸೀಮಿತವಾಗಿದೆ ಮತ್ತು ಮುಖ್ಯ ವ್ಯವಹಾರ ಪ್ರದೇಶಗಳಲ್ಲಿನ ಶಾಖೆಗಳಲ್ಲಿ ಸಾಮಾನ್ಯವಾಗಿ ಲಭ್ಯವಾಗುತ್ತದೆ. ಉದಾಹರಣೆಗೆ ಮುಂಬೈನ ಫೋರ್ಟ್ ಅಂಡ್ ನಾರಿಮನ್ ಪ್ರದೇಶ ಮತ್ತು ನವದೆಹಲಿಯ ಕನಾಟ್ ಪ್ಲೇಸ್, ನವದೆಹಲಿ.

ಪರಸ್ಥಳದ ಚೆಕ್ಕುಗಳ ವಿಲೇವಾರಿಗೆ ಮೂರರಿಂದ ಹತ್ತು ದಿವಸಗಳನ್ನು ತೆಗೆದುಕೊಳ್ಳಲಾಗುತ್ತದೆ. ರಿಸರ್ವ್ ಬ್ಯಾಂಕು ತಮ್ಮ ಚೆಕ್ಕುಗಳ ಸಂಗ್ರಹ ನೀತಿಯನ್ನು ಪ್ರಚಾರ ಮಾಡಲು ಎಲ್ಲಾ ಬ್ಯಾಂಕುಗಳಿಗೆ ಸಲಹೆ ನೀಡಲಾಗಿದೆ. ಇದರಿಂದ ಗ್ರಾಹಕರು ಉತ್ಪತ್ತಿಗಳನ್ನು ಉಪಯೋಗಕ್ಕಾಗಿ ಯಾವಾಗ ಪಡೆಯಬಹುದು ಎಂಬುದರ ಅರಿವು ಮೂಡುತ್ತದೆ. ಸಾಮಾನ್ಯ ಅವಧಿಯನ್ನು ಮೀರಿದ ವಿಳಂಬಕ್ಕಾಗಿ ಬ್ಯಾಂಕುಗಳು ಗ್ರಾಹಕನಿಗೆ ನಷ್ಟಭರ್ತಿ ಮಾಡಿಕೊಡಬೇಕಾಗುತ್ತದೆ. (ಗ್ರಾಹಕನು ಅದಕ್ಕಾಗಿ ಕೇಳದೆ ಇದ್ದರೂ ಕೂಡಾ)

8. ಸಂದಾಯಗಳಿಗಾಗಿ ಚೆಕ್ಕುಗಳನ್ನು ಉಪಯೋಗಿಸುವ ಮೂಲಕ ಬ್ಯಾಂಕ್ ಗ್ರಾಹಕನು ಯಾವುದೇ ವೆಚ್ಚವನ್ನು ವಹಿಸಬೇಕಾಗುತ್ತದೆಯೇ?

ಚೆಕ್ಕುಗಳ ಮೂಲಕ ಸಂದಾಯವನ್ನು ಸ್ವೀಕರಿಸುವ ವ್ಯಕ್ತಿಯು ಈ ಬ್ಯಾಂಕಿನ ಮೂಲಕ ನಿಧಿಗಳನ್ನು ಸಂಗ್ರಹಿಸಲು ಕೆಲವು ವೆಚ್ಚಗಳನ್ನು ಭರಿಸಬೇಕಾಗುತ್ತದೆ. ಸ್ಥಳೀಯ ಚೆಕ್ಕುಗಳ ಸಂಬಂಧದಲ್ಲಿ ಯಾವುದೇ ವೆಚ್ಚಗಳನ್ನು ವಿಧಿಸಲಾಗುವುದಿಲ್ಲ. ಹೊರಸ್ಥಳದ ಚೆಕ್ಕುಗಳ ಸಂದರ್ಭದಲ್ಲಿ ಚೆಕ್ಕುಗಳ ಮೊಬಲಗನ್ನು ಮತ್ತು ಯಾವ ಸ್ಥಳದಿಂದ ಅದನ್ನು ಸಂಗ್ರಹಿಸಬೇಕಾಗಿದೆಯೋ ಆ ಸ್ಥಳವನ್ನು ಅವಲಂಬಿಸಿ ಕೆಲವು ಸಂಸ್ಕರಣ / ಸಂಗ್ರಹಣಾ ವೆಚ್ಚಗಳನ್ನು ತೆಗೆದುಕೊಳ್ಳಲಾಗುತ್ತದೆ, ಬ್ಯಾಂಕುಗಳು ವಿಧಿಸುವ ವೆಚ್ಚಗಳನ್ನು ಇಂಡಿಯನ್ ಬ್ಯಾಂಕುಗಳ ಸಂಘ (IBA) ಅಥವಾ ಸ್ವತಃ ಬ್ಯಾಂಕಿನ ಮೂಲಕ ಸಾಮಾನ್ಯವಾಗಿ ನಿರ್ಧರಿಸಲಾಗುತ್ತದೆ. ಸೇವಾ ವೆಚ್ಚಗಳ ಅನುಸೂಚಿಯನ್ನು ಬ್ಯಾಂಕುಗಳು ಪ್ರಚಾರ ಮಾಡುವುದು ಅವಶ್ಯಕವಾಗಿದೆ.

9. ಚೆಕ್ಕುಗಳನ್ನು ಮತ್ತು ನಗದುಗಳನ್ನು ಉಪಯೋಗಿಸದೆ ಸಂದಾಯಗಳನ್ನು ಹೇಗೆ ಮಾಡಬಹುದು?

ಸಂದಾಯಗಳನ್ನು, ಚೆಕ್ಕುಗಳನ್ನು ಉಪಯೋಗಿಸದೆಯೇ ವಿದ್ಯುನ್ಮಾನ ಸೂಚನೆಗಳ ಮೂಲಕ ಇಬ್ಬರು ಅಥವಾ ಹೆಚ್ಚು ಪಕ್ಷಕಾರರ ನಡುವೆ ಮಾಡಬಹುದಾಗಿದೆ. ಸಣ್ಣ ಮೊತ್ತದ ಸಂದಾಯ ವ್ಯವಸ್ಥೆಗಳನ್ನು ವಿದ್ಯುನ್ಮಾನ ನಿಧಿಗಳ ವರ್ಗಾವಣೆ (EFT), ವಿದ್ಯುನ್ಮಾನ ಕ್ಲಿಯರಿಂಗ್ ಸೇವೆ (ECS)(ಕ್ರೆಡಿಟ್ / ಡೆಬಿಟ್ ಕಾರ್ಡುಗಳು ಇತ್ಯಾದಿಗಳಮೂಲಕ ಮಾಡಲು ಅವಕಾಶವಿದೆ.

10. ಒಂದು ಬ್ಯಾಂಕಿನ ಗ್ರಾಹಕನು ಬೇರೊಂದು ಬ್ಯಾಂಕಿನ ಎಟಿಎಂನ್ನು ಬಳಸಬಹುದೇ?

ಹೌದು, ಗ್ರಾಹಕರ ಬ್ಯಾಂಕು ಎ.ಟಿ.ಎಂನ್ನು ಹೊಂದಿರುವ ಮತ್ತೊಂದು ಬ್ಯಾಂಕಿನೊಂದಿಗೆ ಏರ್ಪಾಡನ್ನು ಮಾಡಿಕೊಂಡಿದ್ದರೆ ಇದು ಸಾಧ್ಯ. ಈಗ ಸೀಮಿತ ಬ್ಯಾಂಕಿನ ಎ.ಟಿ.ಎಂ.ಗಳ ಸಂಖ್ಯೆ ಬಹಳ ಕಡಿಮಯಿರುತ್ತದೆ ಮತ್ತು ಸಾಮಾನ್ಯವಾಗಿ ಅಂತ ಎ.ಟಿ.ಎಂ. ಗಳನ್ನು ಶಾಖೆಯ ಆವರಣಗಳಲ್ಲಿ ಸ್ಥಾಪಿಸಲಾಗುತ್ತಿದೆ. ಇನ್ನೊಂದು ಬ್ಯಾಂಕಿನ ಎ.ಟಿ.ಎಂ.ನ್ನು ಉಪಯೋಗಿಸಿದ ಸಂದರ್ಭದಲ್ಲಿ ಸಾಮಾನ್ಯವಾಗಿ ಅಂತರ್ ಬದಲಾವಣೆಯ ಸೇವಾ ಶುಲ್ಕವನ್ನು ಗ್ರಾಹಕನ ಮೇಲೆ ವಿಧಿಸಲಾಗುತ್ತದೆ.

11. ಎ.ಟಿ.ಎಂ.ಗಳನ್ನು ನಗದು ಹಿಂದೆ ಪಡೆಯುವುದಕ್ಕಾಗಿ ಮಾತ್ರ ಉಪಯೋಗಿಸಲಾಗುತ್ತಿದೆಯೇ?

ನಗದು ಪಡೆಯುವುದರ ಜೊತೆಗೆ ಬೇರೆಬೇರೆ ಸೇವೆಗಳ ಬಿಲ್‌ಗಳು, ಖಾತೆಗಳ ನಡುವಿನ ನಿಧಿಗಳ ವರ್ಗಾವಣೆ, ಚೆಕ್ಕುಗಳ ಠೇವಣಿ ಮತ್ತು ಖಾತೆಗಳಿಗೆ ನಗದು ಜಮೆ ಮಾಡಲು, ಶಿಲ್ಕು ವಿಚಾರಣೆ ಮತ್ತು ಎ.ಟಿ.ಎಂ.ಗಳನ್ನು ಹೊಂದಿರುವ ಬ್ಯಾಂಕು / ಬ್ಯಾಂಕುಗಳು ನೀಡಬಯಸುವಂತಹ ಇತರ ಹಲವಾರು ಬ್ಯಾಂಕಿಂಗ್ ವ್ಯವಹಾರಗಳಿಗೆ ಸಂದಾಯ ಮಾಡುವುದಕ್ಕಾಗಿ ಎ.ಟಿ.ಎಂ.ಗಳನ್ನು ಉಪಯೋಗಿಸಬಹುದು.

12. ಸಂದಾಯ ವ್ಯವಸ್ಥೆಗಳಲ್ಲಿ ಕ್ರೆಡಿಟ್/ಡೆಬಿಟ್ ಕಾರ್ಡುಗಳ ಪಾತ್ರವೇನು?

ಕ್ರೆಡಿಟ್/ಡೆಬಿಟ್ ಕಾರ್ಡುಗಳನ್ನು ದೇಶದಾದ್ಯಂತ ಉಪಯೋಗಿಸಲಾಗುತ್ತದೆ. ಅವುಗಳು ಚೆಕ್ಕುಗಳ ಮತ್ತು ನಗದಿತ ಉಪಯೋಗ ಮಾಡದೆ ಸರಕುಗಳು ಮತ್ತು ಸೇವೆಗಳಿಗಾಗಿ ಸಂದಾಯಗಳನ್ನು ಮಾಡುವ ಅನುಕೂಲಕರ ರೀತಿಯನ್ನು ಒದಗಿಸುತ್ತವೆ. ಬ್ಯಾಂಕುಗಳು ತಮ್ಮ ಗ್ರಾಹಕರಿಗೆ ಕ್ರೆಡಿಟ್ ಕಾರ್ಡುಗಳನ್ನು ನೀಡುತ್ತವೆ. ಕ್ರೆಡಿಟ್/ ಡೆಬಿಟ್ ಕಾರ್ಡುಗಳ ಸಂದಾಯವನ್ನು ಸ್ವೀಕರಿಸುವ ವ್ಯಾಪಾರಿ ಸಮೂಹವು ಅದನ್ನು ಸ್ವಂತ ಬ್ಯಾಂಕಿನ ಮೂಲಕ ಗ್ರಾಹಕರ ಬ್ಯಾಂಕಿನಿಂದ ಮೊಬಲಗನ್ನು ಕ್ಲೇಮು ಮಾಡುತ್ತದೆ.

13. ಡೆಬಿಟ್ ಕಾರ್ಡು ಕ್ರೆಡಿಟ್ ಕಾರ್ಡಿಗಿಂತ ಹೇಗೆ ಭಿನ್ನವಾಗಿರುತ್ತವೆ?

ಡೆಬಿಟ್ ಕಾರ್ಡು ಖಾತೆಗೆ ನೇರ ಕೈಗೆಟಕುವ ರೀತಿಯ ಅವಕಾಶವಿರುವ ಕಾರ್ಡ್ ಆಗಿರುತ್ತದೆ. (ವ್ಯವಹಾರ ಮಾಡಿದ ಮೊಬಲಗನ್ನು ಕೂಡಲೇ ಖರ್ಚು ಹಾಕಲಾಗುತ್ತದೆ) ಡೆಬಿಟ್ ಕಾರ್ಡ್‌ನಲ್ಲಿ ವ್ಯವಹರಿಸಬೇಕಾದ ಅನುಮತಿಸಿದ ಮೊಬಲಗನ್ನು ಕಾರ್ಡು ಉಪಯೋಗಿಸುವವರ ಖಾತೆಯ ಜಮೆಯಲ್ಲಿರುವ ಮೊಬಲಗಿನಷ್ಟರಮಟ್ಟಿಗೆ ಸೀಮಿತವಾಗಿರುತ್ತದೆ. ಆದರೆ ಕ್ರೆಡಿಟ್ ಕಾರ್ಡ್ ಉಪಯೋಗಿಸುವವರಿಗೆ ಸಾಲದ ಸೌಲಭ್ಯವನ್ನು ಒಳಗೊಂಡಿರುತ್ತದೆ. ಹಾಗೂ ರಸೀದಿಯನ್ನು ಸ್ವೀಕರಿಸಿದ ಮೇಲೆ ಪೂರ್ಣವಾಗಿ ಅಥವಾ ಕಂತುಗಳಲ್ಲಿ ಭಾಗಶ: ಕಾರ್ಡು ಉಪಯೋಗಿಸುವವನು ಹಣ ಸಂದಾಯ ಮಾಡುತ್ತಾನೆ.

14. ಇಎಫ್‌ಟಿ ಎಂದರೇನು?

ವಿದ್ಯುನ್ಮಾನ ನಿಧಿಗಳ ವರ್ಗಾವಣೆ (ಇಎಫ್‌ಟಿ) ಒಂದು ವ್ಯವಸ್ಥೆಯಾಗಿದ್ದು ಆ ಮೂಲಕ ಯಾವುದೇ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಗೆ / ಕಂಪನಿ ಇತ್ಯಾದಿಗೆ ಹಣ ಸಂದಾಯ ಮಾಡಬಯಸಿದರೆ, ತನ್ನ ಬ್ಯಾಂಕನ್ನು ಸಂಪರ್ಕಿಸಬಹುದು ಮತ್ತು ನಗದು ಸಂದಾಯವನ್ನು ಮಾಡಬಹುದು ಅಥವಾ ಸ್ವೀಕರ್ತ / ಫಲಾನುಭವಿಯ ಬ್ಯಾಂಕಿನ ಖಾತೆಗೆ ತನ್ನ ಸ್ವಂತ ಖಾತೆಯಿಂದ ನೇರವಾಗಿ ನಿಧಿಗಳನ್ನು ವರ್ಗಾವಣೆ ಮಾಡಲು ಸೂಚನೆಗಳು / ಅಧಿಕಾರಗಳನ್ನು ನೀಡಬಹುದು. ಸ್ವೀಕರಿಸುವವನ ಹೆಸರು, ಬ್ಯಾಂಕ್ ಖಾತೆಯ ಸಂಖ್ಯೆ, ಖಾತೆಯ ಬಗ್ಗೆ (ಉಳಿತಾಯ ಅಥವಾ ಚಾಲ್ತಿ ಖಾತೆ) ಬ್ಯಾಂಕ್ ಹೆಸರು, ನಗರ ಶಾಖೆಯ ಹೆಸರು ಇತ್ಯಾದಿಗಳನ್ನು ಅಂತ ವರ್ಗಾವಣೆಗಳನ್ನು ಮಾಡುವುದಕ್ಕೆ ವಿನಂತಿಸಿಕೊಳ್ಳುವ ಸಮಯದಲ್ಲಿ ಬ್ಯಾಂಕಿಗೆ ಒದಗಿಸತಕ್ಕದ್ದು. ಇದರಿಂದ ಮೊಬಲಗು ಫಲಾನುಭವಿಗಳ ಖಾತೆಗೆ ಸರಿಯಾಗಿ ಮತ್ತು ಶೀಘ್ರವಾಗಿ ತಲುಪುತ್ತದೆ. ಆರ್‌ಬಿಐ ಇಎಫ್‌ಟಿಗೆ ಸೇವೆ ಒದಗಿಸುತ್ತದೆ.

15. ನಾನು ಭಾರತದಲ್ಲಿ ಯಾವುದೇ ಭಾಗಕ್ಕೆ ನಿಧಿಗಳನ್ನು ವರ್ಗಾವಣೆ ಮಾಡಲು ಇಎಫ್‌ಟಿಯನ್ನು ಬಳಸಿಕೊಳ್ಳಬಹುದೇ?

ಈಗ ಇಎಫ್‌ಟಿ ಸೌಲಭ್ಯವು ದೇಶದಾದ್ಯಂತ 15 ಪ್ರಮುಖ ನಗರ ಮತ್ತು ಪಟ್ಟಣಗಳಲ್ಲಿ ಬ್ಯಾಂಕ್ ಖಾತೆಗಳ ನಡುವೆ ನಿಧಿಗಳ ವರ್ಗಾವಣೆಗಾಗಿ ಲಭ್ಯವಿರುತ್ತವೆ. ವಿಶೇಷ ಇಎಫ್‌ಟಿ (ಎಸ್‌ಇಎಫ್‌ಟಿ) ಎಂದು ಕರೆಯಲಾಗುವ ಮತ್ತೊಂದು ವಿಶೇಷ ಯೋಜನೆಯಡಿಯಲ್ಲಿ 200ಕ್ಕೂ ಮೇಲ್ಪಟ್ಟ ನಗರಗಳಲ್ಲಿನ ಆಯ್ದ ಶಾಖೆಗಳಲ್ಲಿ (ಅವು ಬ್ಯಾಂಕುಗಳ ಕಂಪ್ಯೂಟರ್ ನೆಟ್‌ವರ್ಕ್‌ನಲ್ಲಿದ್ದರೆ) ವಿದ್ಯುನ್ಮಾನ ನಿಧಿಗಳ ವರ್ಗಾವಣೆಯ ಸೌಲಭ್ಯವನ್ನು ಜಾರಿಗೆ ತರಲಾಗಿದೆ. ನಗರಗಳ ಮತ್ತು ಶಾಖೆಗಳ ವಿವರಗಳನ್ನು ಸಂಬಂಧಪಟ್ಟ ಬ್ಯಾಂಕುಗಳಿಂದ ಹಾಗೂ ಆರ್‌ಬಿಐ ವೆಬ್‌ಸೈಟ್‌ನಿಂದ ಕೂಡಾ ಪಡೆದುಕೊಳ್ಳಬಹುದಾಗಿದೆ.

16. ಇಎಫ್‌ಟಿ ಮೂಲಕ ನಿಧಿಗಳನ್ನು ವರ್ಗಾಯಿಸಲು ಎಷ್ಟು ಸಮಯ ತೆಗೆದುಕೊಳ್ಳುತ್ತದೆ?

ನಿಧಿಗಳನ್ನು ವರ್ಗಾವಣೆ ಮಾಡಲು ವಿನಂತಿಸಿಕೊಂಡ ಸಮಯವನ್ನು ಅವಲಂಬಿಸಿ ನಿಧಿಗಳ ವರ್ಗಾವಣೆಯು ಸಾಮಾನ್ಯವಾಗಿ ಅದೇ ದಿವಸ ಹೆಚ್ಚೆಂದರೆ, ಮರುದಿನ (ಕೆಲಸದ ದಿನ) ಅಗುತ್ತದೆ. ಗ್ರಾಹಕನು ನಿಧಿಗಳನ್ನು ವರ್ಗಾವಣೆ ಮಾಡಲು ವಿನಂತಿಸಿಕೊಳ್ಳುವ ಸಮಯದಲ್ಲಿ ತನ್ನ ಬ್ಯಾಂಕಿನಿಂದ ಈ ವಿಷಯವನ್ನು ದೃಢಪಡಿಸಿಕೊಳ್ಳತಕ್ಕದ್ದು.

17. ಇಎಫ್‌ಟಿ ನಿಧಿಗಳನ್ನು ವರ್ಗಾವಣೆ ಮಾಡುವುದಕ್ಕಾಗಿ ಯಾವುದೇ ವೆಚ್ಚಗಳು ಇರುತ್ತವೆಯೇ?

ಬ್ಯಾಂಕುಗಳು ಸಾಮಾನ್ಯವಾಗಿ, ಡಿಮ್ಯಾಂಡ್ ಡ್ರಾಫ್ಟ್‌ಗಳು, ಪಾವತಿ ಆದೇಶಗಳು ಇತ್ಯಾದಿಗಳಂತಹ ಇತರ ಸೇವೆಗಳ ಸಂದರ್ಭದಲ್ಲಿ ತೆಗೆದುಕೊಳ್ಳುವಂಥ ಸೇವಾಶುಲ್ಕದ ರೀತಿಯಲ್ಲಿಯೇ ಇಎಫ್‌ಟಿಗಾಗಿ ಕೆಲವು ಪ್ರೊಸೆಸಿಂಗ್ ಶುಲ್ಕಗಳನ್ನು ವಿಧಿಸುತ್ತವೆ. ವಾಸ್ತವಿಕ ವೆಚ್ಚಗಳು, ಮೊಬಲಗು ಮತ್ತು ಬ್ಯಾಂಕ್ ಗ್ರಾಹಕರ ಮೇಲೆ ಅವಲಂಬಿಸಿರುತ್ತದೆ. ಈಗ ಆರ್‌ಬಿಐ ನಡೆಸುತ್ತಿರುವ ಕ್ಲಿಯರಿಂಗ್ ಹೌಸ್‌ಗಳಲ್ಲಿ ಅಂಥ ನಿಧಿಗಳ ವರ್ಗಾವಣೆ ವ್ಯವಹಾರಗಳನ್ನು ಪ್ರೊಸೆಸ್

ಮಾಡುವುದಕ್ಕಾಗಿ ಬ್ಯಾಂಕುಗಳಿಂದ ವಸೂಲು ಮಾಡಲಾಗುತ್ತಿದ್ದ ಇಎಫ್‌ಟಿ ಮೇಲಿನ ತನ್ನ ಎಲ್ಲಾ ವೆಚ್ಚಗಳನ್ನು ಮನ್ನಾ ಮಾಡಿದೆ. ಇದು ನಿಶ್ಚಿತವಾಗಿಯೂ ಬ್ಯಾಂಕುಗಳ ಪ್ರೊಸೆಸಿಂಗ್ ವೆಚ್ಚವನ್ನು ಕಡಿಮೆ ಮಾಡಿದೆ.

18. ನಿಧಿಗಳನ್ನು ಸ್ವೀಕರಿಸುವುದಕ್ಕಾಗಿ/ ಸಂದಾಯಗಳನ್ನು ಮಾಡುವುದಕ್ಕಾಗಿ ವಿದ್ಯುನ್ಮಾನ ಕ್ಲಿಯರಿಂಗ್ ಸೇವೆಯನ್ನು (ECS) ನಾನು ಹೇಗೆ ಬಳಸಿಕೊಳ್ಳಬಹುದು?

ವ್ಯಕ್ತಿಯು ಸಂದಾಯ ಮಾಡುವ ರೀತಿಯು ಪುನರಾವರ್ತನ ಸ್ವರೂಪದ್ದಾಗಿದ್ದರೆ ಮತ್ತು ಅತ್ಯಂತ ಸಣ್ಣ ಮೊಬಲಗಿನದಾಗಿದ್ದರೆ, ಅದೇ ಬಗೆಯ ಸಂದಾಯಗಳನ್ನು ಅಥವಾ ಸ್ವೀಕೃತಿಗಳನ್ನು ಮಾಡಲು ಈ ವಿದ್ಯುನ್ಮಾನ ಕ್ಲಿಯರಿಂಗ್ ಸೇವೆಯು (ಇಸಿಎಸ್) ಒಂದು ಸಂದಾಯದ ವ್ಯವಸ್ಥೆಯಾಗಿರುತ್ತದೆ. ಈ ಸೌಲಭ್ಯವನ್ನು (ವ್ಯಕ್ತಿಗಳ ನಿಧಿಗಳ ವರ್ಗಾವಣೆಗಳಿಗಿಂತ,) ದೊಡ್ಡ ಪ್ರಮಾಣದ ಸಂದಾಯಗಳನ್ನು ಮಾಡಲು/ ಸ್ವೀಕರಿಸಲು ಕಂಪನಿಗಳು ಮತ್ತು ಸರ್ಕಾರದ ಇಲಾಖೆಗಳಿಗೆ ಒದಗಿಸಲಾಗುತ್ತದೆ. ಆರ್‌ಬಿಐ ಕ್ಲಿಯರಿಂಗ್ ಹೌಸ್‌ಗಳನ್ನು ವ್ಯವಸ್ಥಾಪನೆ ಮಾಡುತ್ತಿರುವ ಮತ್ತು ಎಸ್‌ಬಿಐ ಮತ್ತು ಅದರ ಸಹವರ್ತಿಗಳು ಇತರ ಕೇಂದ್ರಗಳಲ್ಲಿ ವ್ಯವಸ್ಥಾಪನೆ ಮಾಡುತ್ತಿರುವ ಸ್ಥಳಗಳಲ್ಲಿ ಆರ್‌ಬಿಐ ಜಾರಿಗೊಳಿಸಿದ ಭಾರತದಾದ್ಯಂತ 47 ಕೇಂದ್ರಗಳಲ್ಲಿ ಇಸಿಎಸ್ ಸೌಲಭ್ಯವು ದೊರೆಯುತ್ತದೆ. ಈ ಇಸಿಎಸ್‌ನ್ನು ಎರಡು ಬಗೆಗಳಲ್ಲಿ ವಿಭಜಿಸಲಾಗಿದೆ. ಇಸಿಎಸ್ (ಕ್ರೆಡಿಟ್) ವ್ಯಕ್ತಿಗಳಿಗೆ / ಮಾರಾಟಗಾರರಿಗೆ ದೊಡ್ಡ ಪ್ರಮಾಣದ ಸಂದಾಯಗಳನ್ನು ಮಾಡಲು ಮತ್ತು ಇಸಿಎಸ್ (ಡೆಬಿಟ್) ವ್ಯಕ್ತಿಗಳಿಂದ ದೊಡ್ಡ ಪ್ರಮಾಣದ ಉಪಯುಕ್ತ ಸಂದಾಯಗಳನ್ನು ಸ್ವೀಕರಿಸಲು ಇರುತ್ತದೆ.

19. ಇಸಿಎಸ್ (ಕ್ರೆಡಿಟ್) ಎಂದರೇನು?

ಇಸಿಎಸ್ (ಕ್ರೆಡಿಟ್ ಅಡಿಯಲ್ಲಿ ಒಂದು ಸಂಸ್ಥೆ/ ಕಂಪನಿಯು ತನ್ನ ಬ್ಯಾಂಕ್ ಖಾತೆಯಿಂದ ಹಲವಾರು ಸ್ವೀಕರ್ತರಿಗೆ ಅವರ ಖಾತೆಗಳಿಗೆ ನೇರ ಜಮೆ ಮಾಡುವ ಮೂಲಕ ತನ್ನ ಬ್ಯಾಂಕ್ ಖಾತೆಗಳಿಂದ ಸಂದಾಯಗಳನ್ನು ಮಾಡಲಾಗುವುದು. ಉದಾಹರಣೆಗೆ, ಕಂಪನಿಗಳು ತಮ್ಮ ಹೂಡಿಕೆದಾರರಿಗೆ ನಿಯತಕಾಲಿಕ ಡಿವಿಡೆಂಟ್/ ಬಡ್ಡಿ ಸಂದಾಯಗಳನ್ನು ಮಾಡಲು ಇಸಿಎಸ್ (ಕ್ರೆಡಿಟ್) ಸೌಲಭ್ಯವನ್ನು ಬಳಸಿಕೊಳ್ಳುತ್ತಿವೆ. ಅದೇ ರೀತಿ ಬ್ಯಾಂಕುಗಳು, ಸರ್ಕಾರಿ ಇಲಾಖೆಗಳಂತ ನಿಯೋಜಕರು ತಮ್ಮ ನೌಕರರಿಗೆ ಇಸಿಎಸ್ (ಕ್ರೆಡಿಟ್) ಮೂಲಕ ಮಾಸಿಕ ಸಂಬಳದ ಸಂದಾಯಗಳನ್ನು ಮಾಡುತ್ತವೆ. ಮಾರಾಟಗಾರರಿಗೆ ಮಾಡಬೇಕಾದ ಪುನರಾವರ್ತಿತ ಸ್ವರೂಪದ ಸಂದಾಯಗಳನ್ನು ಕೂಡಾ ಈ ವಿಧಾನದ ಮೂಲಕ ಮಾಡಬಹುದು. ಈ ಸಂದಾಯವನ್ನು ಮಾಡುವ ಕಂಪನಿ ಅಥವಾ ಸಂಸ್ಥೆಯು ವ್ಯಕ್ತಿ ಫಲಾನುಭವಿಗಳ ಬ್ಯಾಂಕ್ ಖಾತೆಯ ವಿವರಗಳನ್ನು ಹೊಂದಿರಬೇಕಾಗುತ್ತದೆ. ಸಂದಾಯವನ್ನು ಮಾಡುವ ಕಂಪನಿಯ ಪ್ರಾಯೋಜಿತ ಬ್ಯಾಂಕಿನ ಮೂಲಕ ಈ ಸಂದಾಯಗಳನ್ನು ಮಾಡಲಾಗುತ್ತದೆ ಮತ್ತು ಯಾವ ಮೊತ್ತಕ್ಕಾಗಿ ಒಂದು ನಿರ್ದಿಷ್ಟ ತೀರಿಕೆಗಾಗಿ ಸಂದಾಯವನ್ನು ಮಾಡಲಾಗುತ್ತಿದೆಯೋ ಆ ಸಂದಾಯದ ಒಟ್ಟು ಮೊಬಲಗನ್ನು ತೀರಿಸಲು ಆ ತೀರಿಕೆಯ ದಿನಾಂಕದಂದು ತಮ್ಮ ಖಾತೆಗಳಲ್ಲಿ ಸಾಕಷ್ಟು ಹಣ ಇದೆಯೇ ಎಂದು ಖಚಿತಪಡಿಸಿಕೊಳ್ಳತಕ್ಕದ್ದು. ಪ್ರಾಯೋಜಿತ ಬ್ಯಾಂಕು ಸಾಮಾನ್ಯವಾಗಿ ಯಾವ ಬ್ಯಾಂಕಿನೊಂದಿಗೆ ಕಂಪನಿಯು ತನ್ನ ಖಾತೆಗಳನ್ನು ಇಟ್ಟುಕೊಂಡಿರುತ್ತದೆಯೋ ಆ ಬ್ಯಾಂಕು ಆಗಿರುತ್ತದೆ.

20. ಇಸಿಎಸ್ (ಡೆಬಿಟ್) ಎಂದರೇನು?

ಇಸಿಎಸ್ (ಡೆಬಿಟ್‌ನ್ನು) ದೂರವಾಣಿ, ವಿದ್ಯುಚ್ಛಕ್ತಿ ಇತ್ಯಾದಿಸೇವಾನಿರತ ಕಂಪನಿಗಳು ತಮ್ಮ ಗ್ರಾಹಕರ ಬ್ಯಾಂಕ್ ಖಾತೆಯಿಂದ ನೇರವಾಗಿ ಬಿಲ್ ಸಂದಾಯಗಳನ್ನು ಸ್ವೀಕರಿಸಲು ಬಹುತೇಕವಾಗಿ ಉಪಯೋಗಿಸುತ್ತವೆ. ನಗದು ಮೂಲಕ ಅಥವಾ ಚೆಕ್ಕಿನ ಮೂಲಕ ವಿದ್ಯುನ್ಮಾನ ಬಿಲ್ ಸಂದಾಯ ಮಾಡುವುದರ ಬದಲಾಗಿ ಗ್ರಾಹಕನು (ವ್ಯಕ್ತಿಗಳು ಹಾಗೂ ಕಂಪನಿಗಳು) ವಿದ್ಯುಚ್ಛಕ್ತಿ ಒದಗಿಸುವ/ ಕಂಪನಿ/ ಮಂಡಲಿಯ ಖಾತೆಗಳಿಗೆ ನೇರವಾಗಿ ತನ್ನ ಸ್ವಂತ ಖಾತೆಯಿಂದ ಬಿಲ್ ಸಂದಾಯಗಳನ್ನು ಮಾಡಲು ಆಯ್ಕೆಮಾಡಿಕೊಳ್ಳಬಹುದಾಗಿದೆ. ಈ ಉದ್ದೇಶಕ್ಕಾಗಿ ಗ್ರಾಹಕನು ಯುಟಿಲಿಟಿ ಕಂಪನಿಗೆ (ಪರಂತು, ಕಂಪನಿಯು ಇಸಿಎಸ್ (ಡೆಬಿಟ್) ಯೋಜನೆಗಾಗಿ ಆಯ್ಕೆ ಮಾಡಿಕೊಂಡಿರಬೇಕು) ಯಾವ ಬ್ಯಾಂಕ್ ಖಾತೆಯಿಂದ ಮಾಸಿಕ/ ದ್ವೈಮಾಸಿಕ ಬಿಲ್ ಮೊಬಲಗನ್ನು ನೇರವಾಗಿ ಮುರಿದುಕೊಳ್ಳಬಹುದೋ ಆ ಬ್ಯಾಂಕ್ ಖಾತೆ ವಿವರಗಳನ್ನು ಒದಗಿಸಿ ಒಂದು ಅರ್ಜಿಯನ್ನು ಸಲ್ಲಿಸತಕ್ಕದ್ದು. ಈ ವಿಧಾನದ ಮೂಲಕ ಸಂದಾಯಗಳನ್ನು ಮಾಡುವುದಕ್ಕಾಗಿ ಆಯ್ಕೆ ಮಾಡಿಕೊಳ್ಳುವ ಗ್ರಾಹಕನ ಬ್ಯಾಂಕಿನ ಮೂಲಕ ಅಂಥ ವಿವರಗಳನ್ನು

ಪ್ರಮಾಣೀಕರಿಸಬೇಕಾಗುತ್ತದೆ. ಈ ಆಯ್ಕೆ ಮಾಡಿಕೊಂಡ ಮೇಲೆ ಯುಟಿಲಿಟಿ ಕಂಪನಿಯು ಬಿಲ್ಲು ಬಾಕಿಯಾದ ದಿನಾಂಕದಂದು ತನ್ನ ಬಳಕೆದಾರನ ಖಾತೆಗೆ ಬಿಲ್ ಮೊಬಲಗನ್ನು ಖರ್ಚು ಹಾಕಲು ಗ್ರಾಹಕರ ಬ್ಯಾಂಕಿಗೆ ಸಲಹೆ ನೀಡುವುದು ಮತ್ತು ಕಂಪನಿಯ ಸ್ವಂತ ಖಾತೆಗೆ ಮೊಬಲಗನ್ನು ವರ್ಗಾವಣೆ ಮಾಡುವುದು, ಇದನ್ನು ಪ್ರಾಯೋಜಿತ ಬ್ಯಾಂಕಿನ ಲೆಕ್ಕಕ್ಕೆ ಜಮೆ ಮಾಡುವ ಮೂಲಕ ಮಾಡಲಾಗುತ್ತದೆ. ಸಂದಾಯವನ್ನು ಸ್ವೀಕರಿಸುವ ಕಂಪನಿಯು. ವಾಸ್ತವಿಕ ಬಿಲ್‌ನ್ನು ವಾಡಿಕೆಯಂತೆ ಈ ಮುಂಚೆಯಿದ್ದಂಥ ವಿಳಾಸಕ್ಕೆ ಗ್ರಾಹಕನಿಗೆ ಕಳುಹಿಸಲಾಗುವುದು.

21. ಇಸಿಎಸ್ ಉಪಯೋಗಿಸಲು ಯಾವುದೇ ವೆಚ್ಚಗಳನ್ನು ವಿಧಿಸಲಾಗುತ್ತಿದೆಯೇ?

ಇಎಫ್‌ಟಿ ಸಂದರ್ಭದಲ್ಲಿ ಆರ್‌ಬಿಐ ಬ್ಯಾಂಕುಗಳಿಗೆ ಪ್ರೊಸೆಸಿಂಗ್ ಶುಲ್ಕಗಳನ್ನು ಮನ್ನಾ ಮಾಡಿದಂತೆ, ಈ ಸೌಲಭ್ಯಕ್ಕೂ ಶುಲ್ಕ ಮನ್ನಾ ಮಾಡಿದೆ. ಆದಾಗ್ಯೂ, ಈ ಸೌಲಭ್ಯವನ್ನು ಉಪಯೋಗಿಸುವುದಕ್ಕೆ ಕಾರ್ಪೋರೇಟ್ ಗ್ರಾಹಕರಿಗೆ ಶುಲ್ಕವನ್ನು ಬ್ಯಾಂಕುಗಳು ವಿಧಿಸಲು ಮುಕ್ತವಾಗಿರುತ್ತವೆ.

22. ಅನಿವಾಸಿ ಭಾರತೀಯ ಭಾರತಕ್ಕೆ ಹೇಗೆ ಹಣವನ್ನು ರವಾನೆ ಮಾಡಬಹುದು?

ಅನಿವಾಸಿ ಭಾರತೀಯ, ಒಬ್ಬ ವ್ಯಕ್ತಿಯಾಗಿ ಸಾಗರೋತ್ತರ ಬ್ಯಾಂಕ್ ಒದಗಿಸಿದ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ವಾಡಿಕೆಯ ಬ್ಯಾಂಕಿಂಗ್ ಚಾನಲ್‌ಗಳ ಮೂಲಕ ಭಾರತಕ್ಕೆ ನಿಧಿಗಳನ್ನು ರವಾನೆ ಮಾಡಬಹುದು. ಪರ್ಯಾಯವಾಗಿ ಒಬ್ಬ ಅನಿವಾಸಿ ಭಾರತೀಯ ಅಧಿಕೃತ ಹಣ ವರ್ಗಾವಣೆದಾರರ (ಎಂಟಿಎ) ಮೂಲಕ ನಿಧಿಗಳನ್ನು ರವಾನೆ ಮಾಡಬಹುದು. ನಿಧಿಗಳ ವರ್ಗಾವಣೆಯನ್ನು ಗಂಟೆ ಮಾತ್ರದಲ್ಲಿ ವರ್ಗಾವಣೆ ಮಾಡುವುದಕ್ಕೆ ಅನುಕೂಲ ಕಲ್ಪಿಸುವ ತಮ್ಮ ಒಳರವಾನೆ ಉತ್ಪನ್ನಗಳನ್ನು ಹಲವಾರು ಬ್ಯಾಂಕುಗಳು ಪ್ರಾರಂಭಿಸಿವೆ.

23. ಬ್ಯಾಂಕುಗಳು ತಮ್ಮ ಸ್ವಂತ ವ್ಯವಹಾರಗಳಿಗಾಗಿ ಸಂದಾಯಗಳನ್ನು ಹೇಗೆ ಮಾಡುತ್ತವೆ?

ಸಾಮಾನ್ಯವಾಗಿ ಬ್ಯಾಂಕುಗಳ ಮಧ್ಯದ ವ್ಯವಹಾರಗಳು (ಗ್ರಾಹಕರ ವ್ಯವಹಾರಗಳಿಗೆ ಸೇರದ) ದೊಡ್ಡ ಮೊತ್ತಗಳಿಗಾಗಿ ಮಾಡಲಾಗುತ್ತದೆ. ಆದ್ದರಿಂದ ಅಂಥ ವ್ಯವಹಾರಗಳನ್ನು ಬೃಹತ್ ಮೌಲ್ಯ ನಿಧಿಗಳ ವರ್ಗಾವಣೆಗಳು ಎಂದು ಕರೆಯಲಾಗುತ್ತದೆ. ವಾಸ್ತವಿಕ ನಿಧಿಗಳ ವರ್ಗಾವಣೆಗೆ ಬ್ಯಾಂಕುಗಳು ರಿಜರ್ವ್ ಬ್ಯಾಂಕಿನೊಂದಿಗೆ ಇಟ್ಟುಕೊಂಡು ಬಂದಿರುವಂತಹ ಖಾತೆಗಳ ಮೂಲಕ ಮಾಡಲಾಗುವುದು. ಈ ಉದ್ದೇಶಕ್ಕಾಗಿ ಬ್ಯಾಂಕುಗಳು ಆರ್‌ಬಿಐನೊಂದಿಗೆ ಹೊಂದಿರುವ ತಮ್ಮ ಖಾತೆಗಳ ಮೇಲೆ ತೆಗೆಯುವ ಚೆಕ್ಕುಗಳನ್ನು ಪರಸ್ಪರರಲ್ಲಿ ನೀಡಬಹುದು. ನಂತರ ಅದನ್ನು ತೀರುವೆಮನೆಯ ಮೂಲಕ ಪ್ರೊಸೆಸ್ ಮಾಡಲಾಗುವುದು. ಪರ್ಯಾಯವಾಗಿ ಅವು, ನಿಧಿಗಳ ವರ್ಗಾವಣೆಯು ತಕ್ಷಣವೇ ಸಂಭವಿಸುವ ವಿದ್ಯುನ್ಮಾನ ಸೂಚನೆಗಳ ಮೇಲೆ ಆಧಾರಿತವಾದ ಎಂದರೆ, ವ್ಯಕ್ತಿಗಳು ಹಾಗೂ ಕಂಪನಿಗಳ ಸಂಬಂಧದಲ್ಲಿ ಇಎಫ್‌ಟಿಯಂತೆಯೇ ರೀಯಲ್ ಟೈಮ್ ಗ್ರಾಸ್ ಸೆಟಲ್‌ಮೆಂಟ್ (RTGS) ವ್ಯವಸ್ಥೆಯೆಂದು ಕರೆಯಲಾಗುವ ದೊಡ್ಡ ಮೊತ್ತದ ಸಂದಾಯದ ವ್ಯವಸ್ಥೆಯನ್ನು ಮಾಡಿಕೊಳ್ಳಬಹುದಾಗಿದೆ.

24. ರಿಯಲ್ ಟೈಮ್ ಗ್ರಾಸ್ ಸೆಟಲ್‌ಮೆಂಟ್ ವ್ಯವಸ್ಥೆ ಎಂದರೇನು?

ರಿಯಲ್ ಟೈಮ್ ಗ್ರಾಸ್ ಸೆಟಲ್‌ಮೆಂಟ್ (ಆರ್‌ಟಿಜಿಎಸ್) ವ್ಯವಸ್ಥೆಯನ್ನು ಮಾರ್ಚ್ 2004 ರಿಂದ ಪ್ರಾರಂಭಿಸಲಾಗಿದ್ದು ಈ ವ್ಯವಸ್ಥೆಯ ಮೂಲಕ ಒಂದು ಬ್ಯಾಂಕಿನ ಖಾತೆಯಿಂದ ಇನ್ನೊಂದು ಬ್ಯಾಂಕಿನ ಖಾತೆಗೆ ನಿಧಿಗಳನ್ನು ವರ್ಗಾಯಿಸಲು ವಿದ್ಯುನ್ಮಾನ ಸೂಚನೆಗಳನ್ನು ನೀಡಬಹುದಾಗಿದೆ. ಈ ಆರ್‌ಟಿಜಿಎಸ್ ವ್ಯವಸ್ಥೆಯನ್ನು ಆರ್‌ಬಿಐ ನಿರ್ವಹಿಸುತ್ತದೆ ಮತ್ತು ದಕ್ಷ ಹಾಗೂ ಶೀಘ್ರ ನಿಧಿಗಳ ವರ್ಗಾವಣೆಯನ್ನು ಬ್ಯಾಂಕುಗಳು ತಮ್ಮ ಕಾರ್ಯಾಚರಣೆಗಳನ್ನು ನಡೆಸಲು ಅನುಕೂಲವಾಗುವಂತೆ ಅವುಗಳಿಗೆ ಈ ಸಾಧನೆಯನ್ನು ಒದಗಿಸುತ್ತದೆ. ಹೆಸರೇ ಸೂಚಿಸುವಂತೆ ಬ್ಯಾಂಕುಗಳ ನಡುವೆ ನಿಧಿಗಳ ವರ್ಗಾವಣೆಯು ಅದೇ ಕ್ಷಣ ಸಂಭವಿಸುತ್ತದೆ. ಆದ್ದರಿಂದ ಹಣವು ತಕ್ಷಣವೇ ಫಲಾನುಭವಿಗೆ ತಲುಪಬಹುದು ಮತ್ತು ಫಲಾನುಭವಿಯ ಬ್ಯಾಂಕು 2 ಗಂಟೆಗಳ ಒಳಗಾಗಿ ಫಲಾನುಭವಿಯ ಖಾತೆಗೆ ಜಮೆ ಮಾಡಲು ಜವಾಬ್ದಾರಿಯನ್ನು ಹೊಂದಿರುತ್ತದೆ.

25. ವ್ಯಕ್ತಿಗಳು ಆರ್‌ಟಿಜಿಎಸ್ ವ್ಯವಸ್ಥೆಯ ಮೂಲಕ ಸಂದಾಯಗಳನ್ನು ಮಾಡಬಹುದೇ?

ಹೌದು, ವ್ಯಕ್ತಿಗಳು ಕೂಡ ತಮ್ಮ ಬ್ಯಾಂಕುಗಳ ಮೂಲಕ ಈ ಆರ್‌ಟಿಜಿಎಸ್ ವ್ಯವಸ್ಥೆಯ ಅಡಿಯಲ್ಲಿ ನಿಧಿಗಳನ್ನು ವರ್ಗಾಯಿಸಬಹುದು. ಈ ವ್ಯವಸ್ಥೆಯನ್ನು ಮುಖ್ಯವಾಗಿ ದೊಡ್ಡ ಮೊತ್ತದ ಸಂದಾಯಗಳನ್ನು ಮಾಡುವುದಕ್ಕೆ ರೂಪಿಸಿದಾಗ್ಯೂ ಬ್ಯಾಂಕ್ ಗ್ರಾಹಕರು ತಮ್ಮ ಕಡಿಮೆ ಮೌಲ್ಯದ ಸಂದಾಯಗಳನ್ನು ಕೂಡಲೇ ಪಡೆಯುವುದಕ್ಕಾಗಿ ಈ ಆರ್‌ಟಿಜಿಎಸ್ ಸೌಲಭ್ಯವನ್ನು ಪಡೆದುಕೊಳ್ಳಲು ಅರ್ಹರಿರುತ್ತಾರೆ. ಆರ್‌ಟಿಜಿಎಸ್ ವ್ಯವಹಾರದ ಉದ್ದೇಶಕ್ಕಾಗಿ "ಕಡಿಮೆ ಮೊತ್ತ" ಅಥವಾ "ದೊಡ್ಡ ಮೊತ್ತ" ಎಂದು ಯಾವುದೇ ಪರಿಭಾಷೆಯಿರುವುದಿಲ್ಲ. 31 ಜುಲೈ 2005 ರಂದು ಇದ್ದಂತೆ ಭಾರತದಲ್ಲಿ 401 ನಗರಗಳು ಮತ್ತು ಪಟ್ಟಣಗಳಲ್ಲಿ 7500 ಬ್ಯಾಂಕ್ ಶಾಖೆಗಳಿಗಿಂತಲೂ ಹೆಚ್ಚಿನ ಶಾಖೆಗಳಿಗೆ ಈ ಆರ್‌ಟಿಜಿಎಸ್ ಸೌಲಭ್ಯವು ಲಭ್ಯವಾಗಿತ್ತು. 2006 ಮಾರ್ಚ್‌ರ ವೇಳೆಗೆ ಕನಿಷ್ಠ 10,000 ಶಾಖೆಗಳಿಗೆ ಈ ಸೌಲಭ್ಯವನ್ನು ಒದಗಿಸಲು ಆರ್‌ಬಿಐ ಯೋಚಿಸಿದೆ. ಸದ್ಯಕ್ಕೆ ನಿರ್ವಹಿಸಲು ಎಲ್ಲಾ ಬ್ಯಾಂಕಿನ ಶಾಖೆಗಳು ಆರ್‌ಟಿಜಿಎಸ್ ವ್ಯವಸ್ಥೆಯ ನಿಧಿ ವರ್ಗಾವಣೆಯ ಕಾರ್ಯವಿಧಾನ ಸಾಧ್ಯವಾಗುತ್ತಿಲ್ಲ. ಈ ಸೌಲಭ್ಯವನ್ನು ಬಳಸಿಕೊಳ್ಳುವ ಗ್ರಾಹಕನು ಆರ್‌ಟಿಜಿಎಸ್ ವ್ಯವಸ್ಥೆಯ ಮೂಲಕ ನಿಧಿಗಳನ್ನು ವರ್ಗಾಯಿಸಲು ಅನುಕೂಲ ಮಾಡಿಕೊಡುವಂತೆ ತನ್ನ ಸ್ವಂತ ಬ್ಯಾಂಕಿನ ಶಾಖೆಯು ಹಾಗೂ ಫಲಾನುಭವಿ ಬ್ಯಾಂಕಿನ ಶಾಖೆಯು ಸಮರ್ಥವಾಗಿವೆಯೇ ಎಂಬುದನ್ನು ಕಂಡುಹಿಡಿಯಲು ತನ್ನ ಬ್ಯಾಂಕನ್ನು ಸಂಪರ್ಕಿಸಬಹುದು. ಬ್ಯಾಂಕುಗಳು ತನ್ನ ವಿವೇಚನಾನುಸಾರ ಮತ್ತು ಗ್ರಾಹಕ ಮತ್ತು ತನ್ನ ನಡುವಿನ ಸಂಬಂಧದ ಮೇಲೆ ಆಧಾರಿತವಾಗಿ, ಅಂಥ ನಿಧಿಗಳ ವರ್ಗಾವಣೆ ಮಾಡಲು ಶುಲ್ಕವನ್ನು ವಿಧಿಸಬಹುದು. ಗ್ರಾಹಕನು ಪ್ರತಿಯಾಗಿ ಫಲಾನುಭವಿ ಖಾತೆಗೆ ನಿಧಿಗಳನ್ನು ಜಮೆ ಮಾಡಲು ವಿಳಂಬ ಮಾಡಿದ್ದಕ್ಕಾಗಿ ಬಡ್ಡಿಯನ್ನು ಕ್ಲೇಮು ಮಾಡಲು ಹಕ್ಕುಳ್ಳವನಾಗಿರುತ್ತಾನೆ.

26. ಸಂದಾಯ ವ್ಯವಸ್ಥೆಗಳ ಅಡಿಯಲ್ಲಿ ಗ್ರಾಹಕರ ಸೇವೆಗಳಿಗೆ ಸಂಬಂಧಿಸಿದಂತೆ ಯಾವುವೇ ದೂರುಗಳು ಇದ್ದ ಸಂದರ್ಭದಲ್ಲಿ ನಾನು ಯಾರನ್ನು ಸಂಪರ್ಕಿಸಬೇಕು?

ಗ್ರಾಹಕನು ತನ್ನ ದೂರಿನ ಪರಿಹಾರಕ್ಕಾಗಿ ಸಂಬಂಧಪಟ್ಟ ಬ್ಯಾಂಕನ್ನು ಸಂಪರ್ಕಿಸಬಹುದು. ಪ್ರತಿಕ್ರಿಯೆ/ ಬ್ಯಾಂಕಿನಿಂದ ತೃಪ್ತಿಕರ ಪರಿಹಾರ ದೊರೆಯದಿದ್ದಲ್ಲಿ ಸ್ಥಳೀಯ ಆರ್‌ಬಿಐ ಕಚೇರಿಯಲ್ಲಿ ದೂರು ನಿವಾರಣ ಘಟಕ (ಸೆಲ್) ಏನಾದರೂ ಇದ್ದರೆ ಅದನ್ನು ಸಂಪರ್ಕಿಸಬಹುದು. ಈ ದೂರಿನ ಪರಿಹಾರಕ್ಕಾಗಿ ಗ್ರಾಹಕನು ಬ್ಯಾಂಕಿಂಗ್ ಲೋಕಪಾಲರನ್ನು ಸಂಪರ್ಕಿಸಬಹುದು.

27. ಚೆಕ್ ಟ್ರಂಕೇಶನ್ (ಪ್ರತಿರೂಪ ರವಾನೆ) ಎಂದರೇನು?

ಇದೊಂದು ಬ್ಯಾಂಕುಗಳ ನಡುವಿನ ಚೆಕ್ ತೀರುವಳಿ ಹಾಗೂ ಹಣದ ಚುಕ್ತಾವ್ಯವಸ್ಥೆ. ಈ ವ್ಯವಸ್ಥೆ, ವಿದ್ಯುನ್ಮಾನ ದತ್ತಾಂಶ ಹಾಗೂ ಚೆಕ್ ಪ್ರತಿರೂಪ ಅಥವಾ ಇವೆರಡನ್ನೂ ಒಳಗೊಂಡಿದ್ದು ಈ ಮುಖಾಂತರ ಚೆಕ್ಕುಗಳ ವಾಸ್ತವಿಕ ವಿನಿಮಯವನ್ನು ಮೊಟಕುಗೊಳಿಸಲಾಗುತ್ತದೆ.

28. ಚೆಕ್ ಟ್ರಂಕೇಶನ್ (ಪ್ರತಿರೂಪ ರವಾನೆ) ಮಾಡುವುದರಿಂದ ಬ್ಯಾಂಕಿನ ಗ್ರಾಹಕರಿಗೆ ಹೇಗೆ ಪ್ರಯೋಜನ ಆಗುತ್ತದೆ?

ಬ್ಯಾಂಕ್ ಗ್ರಾಹಕರು ಚೆಕ್ ಟ್ರಂಕೇಶನ್ ವ್ಯವಸ್ಥೆಯಲ್ಲಿ (ಸಿಟಿಎಸ್) ಸ್ಥಳೀಯ ಕ್ಲಿಯರಿಂಗ್‌ನಲ್ಲಿ ಅದೇದಿನ (T+0) ಮತ್ತು ಅಂತರ್ ನಗರ ಕ್ಲಿಯರಿಂಗ್‌ನಲ್ಲಿ ಮರುದಿನ (T+1) ತಮ್ಮ ಚೆಕ್ಕುಗಳನ್ನು ನಗದು ಮಾಡಿಕೊಳ್ಳಬಹುದು. ವಹಿವಾಟಿನ ನೇರ ಪ್ರೊಸೆಸಿಂಗ್ ಮತ್ತು ಸ್ವಯಂಚಾಲಿತ ಸಂದಾಯ ಪ್ರೊಸೆಸಿಂಗ್‌ನ ಮೂಲಕ ಶೀಘ್ರ ನಗದು ಮಾಡಿಕೊಳ್ಳಲು ಗ್ರಾಹಕರಿಗೆ ಸಾಧ್ಯವಾಗುವುದರಿಂದ ಗ್ರಾಹಕರು ಮತ್ತು ಬ್ಯಾಂಕುಗಳಿಗೆ ವೆಚ್ಚಗಳಲ್ಲಿ ಕಡಿತವುಂಟಾಗುತ್ತದೆ. ಸಿಟಿಎಸ್ ಮೇಲೆ ಆಧಾರಿತವಾದ ವೈವಿಧ್ಯಮಯ ಉತ್ಪನ್ನಗಳನ್ನು ಮತ್ತು ಸೇವೆಗಳನ್ನು ನೀಡಲು ಬ್ಯಾಂಕುಗಳಿಗೆ ಸಾಧ್ಯವಾಗುತ್ತದೆ. ಬ್ಯಾಂಕುಗಳು ಕಡಿತಗೊಳಿಸಿದ ಸರಿಹೊಂದಾಣಿಕೆ ಕ್ಲಿಯರಿಂಗ್ ಮೋಸಗಳನ್ನು ಕಡಿಮೆ ಮಾಡುವ ಹೆಚ್ಚುವರಿ ಅನುಕೂಲತೆಯನ್ನು ಹೊಂದಬಹುದು.

29. ಸಂದಾಯ ವ್ಯವಸ್ಥೆಗಳಲ್ಲಿ ಆರ್‌ಬಿಐನ ಪಾತ್ರವೇನು?

ಆರ್‌ಬಿಐ ಸಂದಾಯ ವ್ಯವಸ್ಥೆಗಳ ನಿಯಂತ್ರಕ ಮತ್ತು ಮೇಲ್ವಿಚಾರಕನ ಪಾತ್ರವನ್ನು ವಹಿಸುವುದರ ಜೊತೆಗೆ ಇತ್ಯರ್ಥ ಬ್ಯಾಂಕಿನ ಪಾತ್ರವನ್ನು ನಿರ್ವಹಿಸುತ್ತದೆ. ರಿಸರ್ವ್‌ಬ್ಯಾಂಕು ಪ್ರೇರಕ ಶಕ್ತಿ ಆಗುವುದರ ಜೊತೆಗೆ ನಿರ್ವಹಣೆ ಮತ್ತು ಉಪಯೋಗಿಸುವವನ ಪಾತ್ರವನ್ನು ನಿರ್ವಹಿಸುತ್ತದೆ. ದೇಶದಲ್ಲಿ ಹೆಚ್ಚು ದಕ್ಷ ಮತ್ತು ಸುರಕ್ಷಿತ ಸಾಧನಗಳನ್ನು ಪರಿಣಾಮಕಾರಿಯಾಗಿಸುವ ಹೊಸ ವಿಧಾನಗಳ ಅನ್ವೇಶಣೆಯನ್ನು ಆರ್‌ಬಿಐ ಮುಂದುವರಿಸಿಕೊಂಡು ಬರುತ್ತದೆ. ಕಳೆದ 80ನೇ ಇಸವಿಯಲ್ಲಿ 4 ಮಹಾನಗರಗಳಾದ (ಮುಂಬಯಿ, ನವದೆಹಲಿ, ಚೆನ್ನೈ ಮತ್ತು ಕಲ್ಕತ್ತ) ಗಳಲ್ಲಿ ಆರ್‌ಬಿಐ ಮ್ಯಾಗ್ನೆಟಿಕ್ ಇಂಕ್ ಕ್ಯಾರೆಕ್ಟರ್ ರಿಕಗ್ನಿಷನ್ (ಎಂಐಸಿಆರ್) ಮೇಲೆ ಆಧಾರಿತವಾದ ಚೆಕ್ ಕ್ಲಿಯರಿಂಗ್‌ನ ವ್ಯವಸ್ಥೆಯನ್ನು ಪ್ರಾರಂಭಿಸಿದೆ. 90ರ ಮಧ್ಯದಲ್ಲಿ, ಇಸಿಎಸ್ ಮತ್ತು ಇಎಫ್‌ಟಿಗಳಂತಹ ವಿದ್ಯುನ್ಮಾನ ಸಂದಾಯ ವ್ಯವಸ್ಥೆಗಳನ್ನು ಪ್ರಾರಂಭಿಸಿತು. 2004–05 ರಲ್ಲಿ ಆರ್‌ಟಿಜಿಎಸ್‌ನ್ನು ಪ್ರಾರಂಭಿಸಲಾಯಿತು. ಈ ಹೊಸ ವ್ಯವಸ್ಥೆಗಳನ್ನು ಪ್ರಾರಂಭಿಸುವುದರ ಜೊತೆಗೆ ಆರ್‌ಬಿಐ ಅವುಗಳ ಸಾಮರ್ಥ್ಯವನ್ನು ಹೆಚ್ಚಿಸಲು ಮತ್ತು ಗ್ರಾಹಕರ ಅಗತ್ಯತೆಗಳನ್ನು ಪೂರೈಸಲು ಅಸ್ತಿತ್ವದಲ್ಲಿರುವ ವ್ಯವಸ್ಥೆಗಳನ್ನು ಮೇಲ್ದರ್ಜೆಗೆ ಏರಿಸುವುದನ್ನು ಸುನಿಶ್ಚಿತಪಡಿಸುವುದನ್ನು ಸತತವಾಗಿ ಮಾಡುತ್ತಾ ಬಂದಿದೆ. ತಂತ್ರಜ್ಞಾನದಲ್ಲಿ ಪ್ರಗತಿಯ ಅನುಕೂಲಗಳನ್ನು ತೆಗೆದುಕೊಂಡು ಆರ್‌ಬಿಐ ಇವುಗಳ ವ್ಯವಸ್ಥೆಗಳಲ್ಲಿ ಸುರಕ್ಷಿತ ಮತ್ತು ಅಂಥ ವ್ಯವಹಾರಗಳ ಸಮಗ್ರತೆಯನ್ನು ಕಾಪಾಡಿಕೊಂಡು ಬರಲು ಹೆಚ್ಚುವರಿ ಸುರಕ್ಷಿತ ಕ್ರಮಗಳನ್ನು ಜಾರಿಗೆ ತಂದಿದೆ.

ಸಂದಾಯ ವ್ಯವಸ್ಥೆಗಳ ಹಲವಾರು ಘಟಕಾಂಶಗಳನ್ನು ಆಚರಣೆಗೆ ತರುವುದರ ಜೊತೆಗೆ ಆರ್‌ಬಿಐ ಬಳಕೆದಾರನಂತೆಯೂ ಈ ವ್ಯವಸ್ಥೆಗಳಲ್ಲಿ ಭಾಗವಹಿಸುತ್ತದೆ. ಆರ್‌ಬಿಐ ಸೇವೆಯನ್ನು ಒದಗಿಸುವವನಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಈ ವ್ಯವಸ್ಥೆಯು ಬಲಗೊಂಡ ತರುವಾಯ ಹೆಚ್ಚಿನ ಅಭಿವೃದ್ಧಿಗಾಗಿ ಜವಾಬ್ದಾರಿಯನ್ನು ಇತರ ಬ್ಯಾಂಕುಗಳಿಗೆ/ ಸಂಸ್ಥೆಗಳಿಗೆ ವಹಿಸಿಕೊಡುತ್ತದೆ. ಆರ್‌ಬಿಐ ಹಲವಾರು ಸಂದಾಯ ವ್ಯವಸ್ಥೆಗಳನ್ನು ನಿಯಂತ್ರಣಗೊಳಿಸುವ ಮತ್ತು ಮೇಲ್ವಿಚಾರಣೆ ಮಾಡುವ ಪಾತ್ರವನ್ನು ವಹಿಸುತ್ತಿದೆ.

30. ಆರ್‌ಬಿಐ ಸಂದಾಯ ವ್ಯವಸ್ಥೆಗಳನ್ನು ಹೇಗೆ ನಿಯಂತ್ರಿಸುತ್ತದೆ?

ಸಂದಾಯ ಮತ್ತು ಇತ್ಯರ್ಥ ವ್ಯವಸ್ಥೆಗಳ (ಬಿಪಿಎಸ್‌ಎಸ್) ನಿಯಂತ್ರಣ ಮತ್ತು ಮೇಲ್ವಿಚಾರಣ ಮಂಡಳಿಯು ಆರ್‌ಬಿಐನ ಕೇಂದ್ರ ಮಂಡಳಿಯ ಒಂದು ಉಪಸಮಿತಿಯಾಗಿರುತ್ತದೆ ಮತ್ತು ಸಂದಾಯ ವ್ಯವಸ್ಥೆಯ ಮೇಲೆ ಉನ್ನತ ನೀತಿ ನಿರೂಪಣೆ ಮಾಡಲು ಸಮರ್ಥವಾಗಿರುತ್ತದೆ. ಸದಸ್ಯರಾಗಿ ಆ ಕ್ಷೇತ್ರದಲ್ಲಿ ಖ್ಯಾತ ಪರಿಣಿತರನ್ನು ಒಳಗೊಂಡ ರಾಷ್ಟ್ರೀಯ ಸಂದಾಯಗಳ ಪರಿಷತ್ (ಎನ್‌ಪಿಸಿ) ಎಂದು ಕರೆಯಲಾಗುವ ತಾಂತ್ರಿಕ ಸಮಿತಿಯ ಮೂಲಕ ಮಂಡಳಿಗೆ ನೆರವು ನೀಡಲಾಗುತ್ತದೆ. ಮಂಡಳಿ ಹಾಗೂ ಪರಿಷತ್ತಿಗೆ ಹೊಸದಾಗಿ ಸೃಜಿಸಿದ ಸಂದಾಯ ಮತ್ತು ಇತ್ಯರ್ಥ ವ್ಯವಸ್ಥೆಗಳ (ಡಿಪಿಎಸ್‌ಎಸ್) ಇಲಾಖೆಯು ನೆರವು ನೀಡುತ್ತದೆ. ಈ ಮಂಡಳಿಗೆ ದೇಶದಲ್ಲಿ ಅಸ್ತಿತ್ವದಲ್ಲಿರುವ ಮತ್ತು ಭವಿಷ್ಯದ ಸಂದಾಯಗಳಿಗಾಗಿ ಅಧಿಕಾರ ನೀಡುವ ನೀತಿಗಳನ್ನು ಗೊತ್ತುಪಡಿಸುವ ಮತ್ತು ಗುಣಮಟ್ಟಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ವಹಿಸಲಾಗಿದೆ. ಈ ವ್ಯವಸ್ಥೆಗಳು ಮತ್ತು ಸಂಬಂಧಿಸಿದ ಕಾರ್ಯನೀತಿಗಳಿಗೆ ಸದಸ್ಯತ್ವದ ಆಧಾರಾಂಶಗಳನ್ನು ನಿರ್ಧರಿಸಲು ಮಂಡಳಿಗೆ ಅಧಿಕಾರವಿರುತ್ತದೆ.

31. ಕಳೆದ ದಶಕದ ಅವಧಿಯಲ್ಲಿ ಭಾರತದಲ್ಲಿ ಸಂದಾಯ ಮತ್ತು ಹಣ ಚುಕ್ತಾ ವ್ಯವಸ್ಥೆಗಳಲ್ಲಿ ಪ್ರಮುಖ ಬೆಳವಣಿಗೆಗಳು ಯಾವುವು?

ಕಳೆದ ದಶಕದ ಅವಧಿಯಲ್ಲಿ ಬ್ಯಾಂಕುಗಳು ಸಾಮಾನ್ಯ ವ್ಯಕ್ತಿಗಳಿಗೆ ಹಾಗೂ ಕಾರ್ಪೋರೇಟ್ ಸಂಸ್ಥೆಗಳಿಗೆ ನೀಡಿದ ಸಂದಾಯ ವ್ಯವಸ್ಥೆಯ ಸೇವೆಯು ಗಣನೀಯವಾಗಿ ಸುಧಾರಣೆಯಾಗಿವೆ. ಇದು ಭಾಗಶಃ ತಂತ್ರಜ್ಞಾನ ಸೇವೆಯ ಉಪಯೋಗದ ಹೆಚ್ಚಳದಿಂದ ಉಂಟಾಗಿದೆ ಮತ್ತು ಭಾಗಶಃ ಬ್ಯಾಂಕುಗಳ ಒಳಗೆ ಸ್ಪರ್ಧೆಯ ವಾತಾವರಣದಲ್ಲಿ ಅಗತ್ಯವಾದ ಕಾರ್ಯವಿಧಾನದ ಬದಲಾವಣೆಗಳಿಂದ ಕೂಡಾ ಆಗಿದೆ.

ಗೋಚಾರವಾಗುವ ಬದಲಾವಣೆಗಳು ಈ ಕೆಳಕಂಡಂತಿವೆ:

ಮೊದಲನೆಯದಾಗಿ, ಚೆಕ್ ತೀರುವೆ ವ್ಯವಸ್ಥೆಯು ಬಹಳಷ್ಟು ಸುಧಾರಿಸಿದೆ. ಸ್ಥಳೀಯ ಚೆಕ್ಕುಗಳ ಸಂಗ್ರಹಕ್ಕಾಗಿ ತೆಗೆದುಕೊಳ್ಳುವ ಸಮಯವನ್ನು ಎರಡು ಅಥವಾ ಮೂರು ದಿವಸಗಳಿಗೆ ತಗ್ಗಿಸಲಾಗಿದೆ. ಈ ಮುಂಚೆ 4 ಅಥವಾ 5 ದಿವಸಗಳನ್ನು ಇದು ತೆಗೆದುಕೊಳ್ಳುತ್ತಿತ್ತು. 42 ದೊಡ್ಡ ನಗರಗಳಲ್ಲಿ ಸ್ವಯಂಚಾಲಿತ ಚೆಕ್ ಪ್ರೊಸೆಸಿಂಗ್ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ನಗರದಲ್ಲಿ ಎಲ್ಲಾ ಬ್ಯಾಂಕ್ ಶಾಖೆಗಳಿಂದ ಸ್ವೀಕರಿಸಿದ ಚೆಕ್ಕುಗಳನ್ನು ರಾತ್ರಿಯಲ್ಲಿ ಪ್ರೊಸೆಸ್ ಮಾಡಲಾಗುತ್ತಿದೆ. ಹೊರ ಸ್ಥಳದ ಚೆಕ್ಕುಗಳ ಸಂಗ್ರಹಣೆಗಾಗಿ ತೆಗೆದುಕೊಳ್ಳುತ್ತಿದ್ದ ಸಮಯವನ್ನು ಕಡಿತಗೊಳಿಸಲಾಗಿದೆ. ಈಗ ಸಂದಾಯ ಕೇಂದ್ರಗಳ ಸ್ಥಳದ ಮೇಲೆ ಅವಲಂಬಿಸಿ 4 ರಿಂದ 10 ದಿವಸಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಈ ಮುಂಚೆ ಇದಕ್ಕೆ 10 ದಿವಸಗಳಿಂದ 1 ತಿಂಗಳುಗಳ ಕಾಲ ಹಿಡಿಯುತ್ತಿತ್ತು.

ಎರಡನೆಯದಾಗಿ, 90ರ ಅವಧಿಯಲ್ಲಿ ಕೆಲವು ಬಗೆಯ ವಿದ್ಯುನ್ಮಾನ ಸಂದಾಯದ ಉತ್ಪನ್ನಗಳನ್ನು ಪ್ರಾರಂಭಿಸಲಾಯಿತು. ವಿದ್ಯುನ್ಮಾನ ಕ್ಲಿಯರಿಂಗ್ ಸೇವೆಯು (ಇಸಿಎಸ್) ದೊಡ್ಡ ಕಾರ್ಪೋರೇಟ್ ಸಂಸ್ಥೆಗಳು ಅವುಗಳ ಲಾಭಾಂಶವನ್ನು, ಬಡ್ಡಿಯನ್ನು ಮತ್ತು ನಿಗದಿತ ದಿನಾಂಕದಂದು ವಿದ್ಯುನ್ಮಾನ ಮರು ಸಂದಾಯಗಳನ್ನು ಮಾಡಲು ಸಹಾಯ ಮಾಡಿತು. ಹೂಡಿಕೆ ಮಾಡುವ ಸಾರ್ವಜನಿಕರು ಮಾತ್ರವಲ್ಲದೆ ನಿಗದಿತ ದಿನಾಂಕದಂದು ಸಂದಾಯವನ್ನು ಪಡೆಯುವುದಲ್ಲದೆ ಕಾರ್ಪೋರೇಟ್‌ಗಳು ಕೂಡಾ ಕಾಗದ ಲಿಖಿತಗಳನ್ನು ಮುದ್ರಿಸಬೇಕಾಗಿಲ್ಲದಿರುವುದರಿಂದ ಗಣನೀಯವಾದ ಸಮಯವನ್ನು ಉಳಿಸಬಹುದಾಗಿದೆ. 2005–06ರಲ್ಲಿ 36 ದಶಲಕ್ಷ ವ್ಯವಹಾರಗಳನ್ನು ಮಾಡುವುದಾ ಮೂಲಕ ಉಂಟಾದ ಉಳಿತಾಯವನ್ನು ಊಹಿಸಿಕೊಳ್ಳಬಹುದು. ಅದೇ ರೀತಿ ಸೇವಾನಿರತ ಸಂಸ್ಥೆಗಳು ನಿಗದಿತ ದಿನಾಂಕದಂದೇ ಇಸಿಎಸ್ ಮೂಲಕ ತನ್ನ ಬಿಲ್ಲುಗಳನ್ನು ಸಂಗ್ರಹಿಸುವ ಸೌಲಭ್ಯವನ್ನು ಪಡೆದಿವೆ. ನಗದು ಸಂದಾಯ ವ್ಯವಸ್ಥಾಪನೆಯು ಸುಲಭವಾಗುತ್ತಿದೆ. 2004–05 ರಲ್ಲಿ ಅಂಥ 16 ದಶಲಕ್ಷ ವ್ಯವಹಾರಗಳು ನಡೆದಿವೆ.

ಮೂರನೆಯದಾಗಿ ಬ್ಯಾಂಕುಗಳಿಂದ ವಿದ್ಯುನ್ಮಾನ ನಿಧಿಗಳ ಸೌಲಭ್ಯದ (ಇಎಫ್‌ಟಿ) ವಿಸ್ತರಣೆಯು ಹಣ ವರ್ಗಾವಣೆ ದೃಶ್ಯವನ್ನೇ ಬದಲಿಸಿದೆ. ರಿಜರ್ವ್ ಬ್ಯಾಂಕ್ ಒದಗಿಸಿದ ಇಎಫ್‌ಟಿ ಸೌಲಭ್ಯವನ್ನು ಬಳಸಿಕೊಳ್ಳುವ ಮೂಲಕ ವಾಣಿಜ್ಯ ಬ್ಯಾಂಕುಗಳು ಅದೇ ದಿವಸ ತಮ್ಮ ಗ್ರಾಹಕರಿಗೆ ನಿಧಿ ವರ್ಗಾವಣೆ ನೀಡಲು ಪ್ರಾರಂಭಿಸಿವೆ. 15 ಪ್ರಮುಖ ಕೇಂದ್ರಗಳಲ್ಲಿನ ಬ್ಯಾಂಕ್ ಗ್ರಾಹಕರು ಈ ಸೌಲಭ್ಯವನ್ನು ಉಪಯೋಗಿಸಿ ನಿಧಿಗಳನ್ನು ಪರಸ್ಪರ ವರ್ಗಾವಣೆ ಮಾಡಬಹುದು. ವಿಶೇಷ ಇಎಫ್‌ಟಿ ಎಂದು ಕರೆಯಲಾಗುವ ಎಸ್‌ಇಎಫ್‌ಟಿಯನ್ನು ನೆಟ್‌ವರ್ಕ್ ಶಾಖೆಗಳಿಗಾಗಿ ವಿಶೇಷವಾಗಿ ರೂಪಿಸಲಾಗಿದೆ. ಈ ಸೌಲಭ್ಯಗಳು ಅದೇ ದಿನ ಗಣಕೀಕೃತ ಸಮೂಹದ ಒಳಗೆ ಮತ್ತು ದೇಶದಾದ್ಯಂತ ಅಂತರ್‌ಜಾಲ ಶಾಖೆಗಳ ಒಳಗೆ ಅದೇ ದಿವಸ ನಿಧಿಗಳ ವರ್ಗಾವಣೆಯನ್ನು ಮಾಡಬಹುದು. ಅಂತರ್‌ಜಾಲ ಬ್ಯಾಂಕಿಂಗ್ ಮೂಲಭೂತ ಸೌಲಭ್ಯವನ್ನು ಹೊಂದಿರುವ ಬ್ಯಾಂಕುಗಳು ಇಎಫ್‌ಟಿಗಾಗಿ ತಮ್ಮ ಗ್ರಾಹಕರಿಂದ ವಿನಂತಿಗಳನ್ನು ಸ್ವೀಕರಿಸುತ್ತವೆ ಮತ್ತು ನೇರವಾಗಿ ಈ ವಿನಂತಿಗಳನ್ನು ಜಾರಿ ಮಾಡಲಾಗುತ್ತಿದೆ.

ನಾಲ್ಕನೆಯದಾಗಿ ರಿಯಲ್ ಟೈಮ್ ಗ್ರಾಸ್ ಸೆಟಲ್‌ಮೆಂಟ್ (ಆರ್‌ಟಿಜಿಎಸ್) ವ್ಯವಸ್ಥೆಯನ್ನು ಆರ್‌ಬಿಐ ಪ್ರಾರಂಭಿಸಿದ್ದು, ಇಎಫ್‌ಟಿ ಕ್ಷೇತ್ರಕ್ಕೆ ಹೊಸ ಆಯಾಮವನ್ನು ಒದಗಿಸಿದೆ. ಕಾರ್ಪೊರೇಟ್ ಸಂಸ್ಥೆಗಳು ಮತ್ತು ಇತರೆ ಬ್ಯಾಂಕ್ ಗ್ರಾಹಕರು ತಕ್ಷಣವೇ ಹೆಸರಿಸಲಾದ ಶಾಖೆಗಳಿಗೆ (ಈಗ ಸುಮಾರು 9600) ನಿಧಿಗಳನ್ನು ವರ್ಗಾವಣೆ ಮಾಡುವ ಆಯ್ಕೆಯನ್ನು ಹೊಂದಿರುತ್ತಾರೆ. ಆರ್‌ಟಿಜಿಎಸ್ ಚಾಲನ ನಿಯಮಗಳ ಪ್ರಕಾರ ಹಣವನ್ನು ಜಮಾಮಾಡಲಾಗದಿದ್ದರೆ, 2 ಗಂಟೆಗಳೊಳಗೆ ಅದನ್ನು ಮರುಪಾವತಿ ಮಾಡಬಹುದು. ಎಂದರೆ ಗರಿಷ್ಠ ಪ್ರಮಾಣದ ವಿಳಂಬ 2 ಗಂಟೆಗಳು ಮಾತ್ರ.

ಐದನೆಯದಾಗಿ ದೇಶದಲ್ಲಿ ಎಟಿಎಂಗಳನ್ನು ಸ್ಥಾಪಿಸುವಲ್ಲಿ ಶೀಘ್ರಗತಿಯ ಬೆಳವಣಿಗೆಗಳಾಗುತ್ತಿದೆ, ಬ್ಯಾಂಕ್ ಗ್ರಾಹಕರು ಈಗ ನಗದನ್ನು ಪಡೆಯುವುದಕ್ಕಾಗಿ ನಗದನ್ನು ಠೇವಣಿ ಮಾಡುವುದಕ್ಕಾಗಿ, ಶಿಲ್ಕು ವಿಚಾರಣೆಗಾಗಿ ಚೆಕ್‌ಬುಕ್‌ಗಳನ್ನು ಕೋರುವುದಕ್ಕಾಗಿ ತಡೆ ಸೂಚನೆ ಇತ್ಯಾದಿಗಳನ್ನು ನೀಡುವುದಕ್ಕಾಗಿ ನಿರಂತರವಾಗಿ ತಮ್ಮ ಖಾತೆಗಳಿಗೆ ಈಗ ಪ್ರವೇಶಾವಕಾಶವನ್ನು ಪಡೆದಿದ್ದಾರೆ. ಈಗ ಸದ್ಯ ಎಟಿಎಂ ಸಂಖ್ಯೆಯು ಸುಮಾರು 16000 ಇದೆ ಮತ್ತು ಪ್ರತಿ ತಿಂಗಳು ನೂರಾರು ಸಂಖ್ಯೆಗಳಲ್ಲಿ ಹೆಚ್ಚಾಗುತ್ತಿದೆ.

ಆರನೆಯದಾಗಿ, ಕಳೆದ 3 ಅಥವಾ 4 ವರ್ಷಗಳಲ್ಲಿ ದೇಶದಲ್ಲಿ ಸಂದಾಯದ ಮಾಧ್ಯಮವಾಗಿ ಸಂದಾಯ ಕಾರ್ಡುಗಳ ಉಪಯೋಗದಲ್ಲಿ (ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡುಗಳು) ಗಣನೀಯ ಪ್ರಗತಿಯಾಗಿದೆ. 2004ರ ಡಿಸೆಂಬರ್ ಅಂತ್ಯದಲ್ಲಿ ಇದ್ದಂತೆ ದೇಶದಲ್ಲಿ 4.33 ಕೋಟಿ ಸಂದಾಯದ ಕಾರ್ಡುಗಳು ಇದ್ದವು. ಈ ಕಾರ್ಡುಗಳ ಉಪಯೋಗದಲ್ಲಿ ಹೆಚ್ಚಳ ಉಂಟಾಗಿರುವುದು ಸುರಕ್ಷಿತತೆ ಮತ್ತು ಅನುಕೂಲ ಮಾತ್ರವಲ್ಲದೇ, ಸಣ್ಣಪುಟ್ಟ ಗ್ರಾಹಕರ ಸಂಖ್ಯೆ ಗಣನೀಯವಾಗಿ ಏರಿರುವುವ ಕಾರಣವೂ ಸೇರಿದೆ.

ಭಾರತದಲ್ಲಿ ಸಂದಾಯ ವ್ಯವಸ್ಥೆ – ಮುಖ್ಯ ಅಂಕಿ ಅಂಶಗಳು

ಚೆಕ್ ತೀರುವಳಿ (ಕ್ಲಿಯರಿಂಗ್)			
1.	ತೀರುವೆಮನೆಗಳ ಸಂಖ್ಯೆ	1047	
2.	ಎಂಐಸಿಆರ್ ಚೆಕ್ ಪ್ರೊಸೆಸಿಂಗ್ ಸಾಮರ್ಥ್ಯ ಹೊಂದಿರುವ ತೀರುವೆಮನೆಗಳ ಸಂಖ್ಯೆ	42	
3.	ಹೆಚ್ಚುವರಿ ಎಂಐಸಿಆರ್ ಕೇಂದ್ರಗಳ ಸಂಖ್ಯೆ (ಉದ್ದೇಶಿತ)	20	
4.	ದೈನಂದಿನ ಸರಾಸರಿ (ಗಾತ್ರ)		
	40 ಎಂಸಿಆರ್ ಕೇಂದ್ರಗಳು	27.48	ಲಕ್ಷ
	ಇವುಗಳಲ್ಲಿ 4 ಮೆಟ್ರೋ ಕೇಂದ್ರಗಳು	17.49	ಲಕ್ಷ
	ಭಾರತದ ಉಳಿದೆಡೆ	8.73	ಲಕ್ಷ
5.	ದೈನಂದಿನ ಸರಾಸರಿ (ಮೌಲ್ಯ)		
	42 ಎಂಐಸಿಆರ್ ಕೇಂದ್ರಗಳು	145780	ಕೋಟಿ
	ಇವುಗಳಲ್ಲಿ 4 ಮೆಟ್ರೋ ಕೇಂದ್ರಗಳು	22435	ಕೋಟಿ
	ಭಾರತದ ಉಳಿದೆಡೆ	4450	ಕೋಟಿ
6.	ಹೆಚ್ಚಿನ ಮೌಲ್ಯದ ತೀರುವೆ ಕೇಂದ್ರಗಳು	15 ಆರ್‌ಬಿಐ + 30 ಇತರೆ	
ವಿದ್ಯುನ್ಮಾನ ತೀರುವೆ			
1.	ಇ.ಸಿಎಸ್ ಒಳಗೊಂಡ ಕೇಂದ್ರಗಳ ಸಂಖ್ಯೆ		
	ಆರ್.ಬಿ.ಐ.ಕೇಂದ್ರಗಳು	15	
	ಎಸ್.ಬಿ.ಐ. ಕೇಂದ್ರಗಳು	25	
	ಎಸ್.ಬಿ.ಇಂದೂರ್ ಕೇಂದ್ರಗಳು	1	
	ಪಿ.ಎನ್.ಬಿ. ಕೇಂದ್ರಗಳು	2	
	ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ	1	
2.	ಇ.ಎಫ್.ಟಿ ಒಳಗೊಂಡ ಕೇಂದ್ರಗಳ ಸಂಖ್ಯೆ	15	
3.	ಎಸ್.ಇ.ಎಫ್.ಟಿ ಒಳಗೊಳ್ಳುವಿಕೆ		

	ಬ್ಯಾಂಕಿನ ಸಂಖ್ಯೆ	35	
	ಕೇಂದ್ರಗಳ ಸಂಖ್ಯೆ	182	
	ಶಾಖೆಗಳ ಸಂಖ್ಯೆ	3295	
4.	ಇ.ಸಿ.ಎಸ್. ಉಪಯೋಗಿಸುವವರು (ಮುಂಬಯಿ)		
	ಕ್ರೆಡಿಟ್ (ಜಮೆ)	522	
	ಡೆಬಿಟ್ (ಖರ್ಚು ಹಾಕುವುದು)	50	
ದೊಡ್ಡ ಮೌಲ್ಯದ ವ್ಯವಸ್ಥೆ			
1.	ಆರ್ ಟಿ ಜಿ ಎಸ್		
	ಸದಸ್ಯ ಬ್ಯಾಂಕುಗಳು	95+15 ಪಿಡಿಎಸ್	
	ಗ್ರಾಹಕರ ವ್ಯವಹಾರವನ್ನು ನೀಡುವ ಬ್ಯಾಂಕುಗಳ ಸಂಖ್ಯೆ	79	
	ಒಳಗೊಂಡ ಕೇಂದ್ರಗಳು	420	
	ಬ್ಯಾಂಕ್ ಶಾಖೆಗಳು	9614	
	ದೈನಂದಿನ ಸರಾಸರಿ ಗಾತ್ರ/ಮೌಲ್ಯ		
	ಅಂತರ್ ಬ್ಯಾಂಕ್		
	ಗಾತ್ರ	3500	
	ಮೌಲ್ಯ	40,000	ಕೋಟಿ
	ಗ್ರಾಹಕ		
	ಗಾತ್ರ	2500	
	ಮೌಲ್ಯ	10,000	ಕೋಟಿ
2.	ಪಿಡಿಓ ಎನ್ ಡಿ ಎಸ್ ಸದಸ್ಯ	159	
	ದೈನಂದಿನ ಸರಾಸರಿ ಗಾತ್ರ	610	
	ದೈನಂದಿನ ಸರಾಸರಿ ಮೌಲ್ಯ	8984	ಕೋಟಿ
3.	ಸಿಬಿಎಲ್‌ಓ ಕ್ಲಿಯರಿಂಗ್ ಸದಸ್ಯ	113	
	ದೈನಂದಿನ ಸರಾಸರಿ ಗಾತ್ರ	124.92	
	ದೈನಂದಿನ ಸರಾಸರಿ ಮೌಲ್ಯ	4476	ಕೋಟಿ
4.	ಎಫ್ ಎಕ್ಸ್ ಕ್ಲಿಯರಿಂಗ್ ಸದಸ್ಯ (ವಿದೇಶಿ ವಿನಿಮಯ)	73	
	ದೈನಂದಿನ ಸರಾಸರಿ ಗಾತ್ರ	1785.04	
	ದೈನಂದಿನ ಸರಾಸರಿ ಮೌಲ್ಯ	16230	ಕೋಟಿ

	ಕಾರ್ಡ್ ವ್ಯವಹಾರ		
1.	ನೀಡಿದ ಕಾರ್ಡುಗಳ ಸಂಖ್ಯೆ		
	ಕ್ರೆಡಿಟ್	1.35	ಕೋಟಿ
	ಡೆಬಿಟ್	3.79	ಕೋಟಿ
	ಸ್ಮಾರ್ಟ್	35915	
2.	ಎಟಿಎಂ ಗಳ ಸಂಖ್ಯೆ	16,000+	
1.	**ಬ್ಯಾಂಕುಗಳು ನಿರ್ವಹಿಸುವ ತೀರುವೆಮನೆಗಳು**		
	ತೀರುವೆ ಮನೆ	MICR	Non MICR
	ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ	4	1
	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ	14	672
	ಸ್ಟೇಟ್ ಬ್ಯಾಂಕ್ ಆಫ್ ಬಿಕಾನರ್ ಮತ್ತು ಜೈಪುರ		50
	ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್		53
	ಸ್ಟೇಟ್ ಬ್ಯಾಂಕ್ ಆಫ್ ಇಂಡೂರ್	1	23
	ಸ್ಟೇಟ್ ಬ್ಯಾಂಕ್ ಆಫ್ ಮೈಸೂರು		45
	ಸ್ಟೇಟ್ ಬ್ಯಾಂಕ್ ಆಫ್ ಪಾಟಿಯಾಲ		50
	ಸ್ಟೇಟ್ ಬ್ಯಾಂಕ್ ಆಫ್ ಸೌರಾಷ್ಟ್ರ		19
	ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರ್	1	87
	ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ	1	1
	ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ		3
	ಬ್ಯಾಂಕ್ ಆಫ್ ಇಂಡಿಯಾ		1
	ಪಿಎನ್‌ಬಿ	10	1
	ಬಿಓಬಿ		3
	ಓಬಿಸಿ		1
	ಕೆನರಾ		3
	ಸಿಬಿಐ		1
	ಕಾರ್ಪೋರೇಷನ್ ಬ್ಯಾಂಕ್		1
	ಆಂಧ್ರ ಬ್ಯಾಂಕ್		1
	ಒಟ್ಟು	42	1005

2.	**ರಾಜ್ಯವಾರು ತೀರುವೆಮನೆಗಳು**		
	3 ದೊಡ್ಡ ರಾಜ್ಯ		
	ಕರ್ನಾಟಕ		108
	ಉತ್ತರ ಪ್ರದೇಶ		105
	ಕೇರಳ	102	